# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜುಲೈ 9, 2021

ಸಂಪುಟ : 48 ಸಂಚಿಕೆ : 56 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಕೆಲಸ ಮಾಡಲಾಗದಿದ್ದರೆ ಜಿಲ್ಲೆ ಬಿಟ್ಟು ತೊಲಗಿ

### ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಸಂಸದ ಸಿದ್ದೇಶ್ವರ ಗರಂ



ದಾವಣಗೆರೆ, ಜು. 8 - ದಶಕವಾದರೂ ಮುಗಿಯದ ಹೆದ್ದಾರಿ ಸರ್ವೀಸ್ ರಸ್ತೆ ಕಾಮಗಾರಿ, ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳು, ಸ್ಥಳಾಂತರವಾಗದ ಹೈಟೆನ್ಷನ್ ವೈರ್‌ಗಳು, ಮುಖ್ಯ ಪ್ರವೇಶ ದ್ವಾರದ ನೀಲನಕ್ಷೆ ವಿಳಂಬದಿಂದ ತೀವ್ರ ಅಸಮಾಧಾನಗೊಂಡ ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲೆಯಿಂದ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತೊಲಗಲಿ ಎಂದು ಕಿಡಿ ಕಾರಿದ್ದಾರೆ.

ನಗರದ ಜಿಲ್ಲಾಡಳಿತ ಭವನದಲ್ಲಿ ಇಂದು ಕರೆಯಲಾಗಿದ್ದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ, ಸಾಸ್ವೆಹಳ್ಳಿ ಏತ ನೀರಾವರಿ, ಜಗಳೂರು ಏತ ನೀರಾವರಿ, ಭರಮಸಾಗರ ಏತ ನೀರಾವರಿ ಹಾಗೂ 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಸರ್ವೀಸ್ ರಸ್ತೆ ಕಾಮಗಾರಿಯನ್ನು ಬರುವ ಅಕ್ಟೋಬರ್ ವೇಳೆಗೆ ಪೂರ್ಣಗೊಳಿಸುವುದಾಗಿ ಪ್ರಾಧಿಕಾರ ತಿಳಿಸಿತ್ತು. ಆದರೆ, ಈಗ ಗುತ್ತಿಗೆಯನ್ನು ಹೊಸ ಸಂಸ್ಥೆಗೆ ಕೊಡಲು ಟೆಂಡರ್ ಕರೆಯುವುದಾಗಿ ಹೇಳುತ್ತಿದೆ. ಜನವರಿಯಿಂದ ಇದೇ ಪುರಾಣ ಹೇಳಲಾಗುತ್ತಿದೆ ಎಂದವರು ಆಕ್ಷೇಪಿಸಿದರು.

ಹೈಟೆನ್ಷನ್ ವೈರ್ ಸ್ಥಳಾಂತರದ ಗುತ್ತಿಗೆದಾರರು ಓಡಿ ಹೋಗಿದ್ದಾರೆ ಎಂದು ಅಧಿಕಾರಿಗಳು ಹೇಳಿದಾಗ ಅಸಮಾಧಾನಗೊಂಡ ಸಿದ್ದೇಶ್ವರ, 'ಕಂಟ್ರ್ಯಾಕ್ಟರ್ ಭಾಗ್ ಗಯಾ, ತುಮ್ ಭಿ ಭಾಗ್ ಜಾವೋ' (ಗುತ್ತಿಗೆದಾರರು ಓಡಿ ಹೋಗಿದ್ದಾರೆ ಎಂದರೆ, ನೀವೂ ಓಡಿ ಹೋಗಿ) ಎಂದು ತರಾಟೆಗೆ ತೆಗೆದುಕೊಂಡರು. ಕೆಲಸ ಮಾಡಲು ಬರದಿದ್ದರೆ ಜಿಲ್ಲೆಯಿಂದ ಹೊರಟು ಹೋಗಿ. ರಸ್ತೆ ಹೇಗಿದೆಯೋ ಹಾಗೆ ಬಿಡಿ. ನಮ್ಮ ಜಿಲ್ಲೆಗೆ ಬರಬೇಡಿ. ಸಂಬಳ - ಕಮೀಷನ್ ಪಡೆಯಲು ಇಲ್ಲಿರುವಂತಿದೆ. ಹತ್ತು ವರ್ಷವಾದರೂ ಕೆಲಸ ಮಾಡುತ್ತಿಲ್ಲ ಎಂದರೆ ಏಕೆ ಕೆಲಸ ಮಾಡಬೇಕು? ಎಂದವರು ಕಿಡಿ ಕಾರಿದರು.

**ಜಮೀನು ವಶಕ್ಕೆ ಪೊಲೀಸ್ ನೆರವು**

**ಹೆದ್ದಾರಿ ಕಾಮಗಾರಿ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳಿಗಾಗಿ ಪೈಪ್ ಅಳವಡಿಸುವ ಕಾಮಗಾರಿಗೆ ಜಮೀನು ವಶಪಡಿಸಿಕೊಳ್ಳಲು ಅಡ್ಡಿ ಎದುರಾದರೆ ಪೊಲೀಸರ ನೆರವು ಪಡೆಯುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದ್ದಾರೆ. ಕಾಮಗಾರಿಗೆ ಅಗತ್ಯ ಜಮೀನು ವಶಪಡಿಸಿಕೊಳ್ಳಲು ಅಧಿಕಾರಿಗಳು ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕು. ಅಗತ್ಯವಾದರೆ ಪೊಲೀಸರ ನೆರವು ಪಡೆಯಲು ತಿಳಿಸಿದರು.**

ಎಸ್.ಎಸ್. ಆಸ್ಪತ್ರೆ ಬಳಿ ರಸ್ತೆ ಜಂಪ್ ಹೊಡೆಯುವ ರೀತಿ ಇದೆ. ಗೊಲ್ಲರಹಟ್ಟಿ ಬಳಿ ಮೊಣಕಾಲು ತನಕ ಗುಂಡಿ ಇದೆ. ಹೆದ್ದಾರಿ ಹೀಗಿದ್ದರೆ ಜನರು ಸಾವಿಗೀಡಾಗುತ್ತಾರೆ. ಇದಕ್ಕೆ ನೀವು ಹೊಣೆ ಹೊರುತ್ತೀರಾ? ಎಂದು ಪ್ರಶ್ನಿಸಿದರು.

ಜಮೀನು ವಶ ತೊಡಕು, ಗುತ್ತಿಗೆ ಪ್ರಕ್ರಿಯೆ ಸೇರಿದಂತೆ, ಹಲವು ಕಾರಣಗಳಿಂದ ಕಾಮಗಾರಿ ವಿಳಂಬವಾಗಿದೆ ಎಂದು ಹೇಳಿದ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀನಿವಾಸುಲು ನಾಯ್ಡು, ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸುವುದಾಗಿ ಹೇಳಿದರು.

ಕೆರೆಗಳಿಗೆ ನೀರು ತುಂಬಿಸುವ ಪೈಪ್‌ಗಳನ್ನು ಹೆದ್ದಾರಿಯ ಯುಟಿಲಿಟಿ ಕಾರಿಡಾರ್‌ನಲ್ಲಿ ಅಳವಡಿಸಿಕೊಳ್ಳಬಹುದು. ಎಂಟು ಹಳ್ಳಿಗಳಲ್ಲಿ ಇನ್ನೂ ಜಮೀನು ವಶ ನಡೆಯಬೇಕಿದೆ. ಜಮೀನು ವಶದ ನಂತರ ಪೈಪ್ ಅಳವಡಿಕೆಗೆ ಜಾಗ ನೀಡುವುದಾಗಿ ನಾಯ್ಡು ಹೇಳಿದರು.

ಲಕ್ಕಮುತ್ತೇನಹಳ್ಳಿ - (2ನೇ ಪುಟಕ್ಕೆ)

## 23,000 ಕೋಟಿ ಪ್ಯಾಕೇಜ್

### ಕೋವಿಡ್ ಸಮಸ್ಯೆಗಳನ್ನು ಎದುರಿಸಲು ಕೇಂದ್ರ ಘೋಷಣೆ

ನವದೆಹಲಿ ಜು. 8 – ಕೊರೊನಾ ಸಂದರ್ಭದಲ್ಲಿ ಆರೋಗ್ಯ ಮೂಲಭೂತ ಸೌಲಭ್ಯ ಅಭಿವೃದ್ಧಿ ಪಡಿಸಲು 23,123 ಕೋಟಿ ರೂ.ಗಳ ಹಣಕಾಸು ಪ್ಯಾಕೇಜ್‌ಗೆ ಕೇಂದ್ರ ಸಂಪುಟ ಸಮ್ಮತಿಸಿದೆ.

ಪುನರ್‌ರಚನೆಗೊಂಡ ಸಂಪುಟದ ಮೊದಲ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ಈ ಪ್ಯಾಕೇಜ್ ಮುಂದಿನ ಒಂಭತ್ತು ತಿಂಗಳವರೆಗೆ ಜಾರಿಯಲ್ಲಿರಲಿದೆ ಎಂದಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸಂಪುಟ ಸಭೆ ನಡೆದಿತ್ತು.

ಕೊರೊನಾ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಎರಡನೇ ಪ್ಯಾಕೇಜ್ ಪ್ರಕಟಿಸಿದ್ದು, ಅದರಲ್ಲಿ 15 ಸಾವಿರ ಕೋಟಿ ರೂ.ಗಳನ್ನು ಕೊರೊನಾಗೆ ಪ್ರತ್ಯೇಕ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಲು ಬಳಸಲಾಗುವುದು ಎಂದಿದ್ದಾರೆ.

ದೇಶಾದ್ಯಂತ ಆಸ್ಪತ್ರೆಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರ 15 ಸಾವಿರ ಕೋಟಿ ರೂ. ಹಾಗೂ ರಾಜ್ಯ ಸರ್ಕಾರಗಳು 8 ಸಾವಿರ ಕೋಟಿ ರೂ. ಒದಗಿಸಿವೆ. ದೇಶದ ಎಲ್ಲಾ 736 ಜಿಲ್ಲೆಗಳಲ್ಲಿ ಈ ಯೋಜನೆ ಮೂಲಕ ವೈದ್ಯಕೀಯ ಸೌಲಭ್ಯ ಸುಧಾರಿಸಲಾಗುವುದು ಎಂದವರು ಹೇಳಿದ್ದಾರೆ.

2.4 ಲಕ್ಷ ಸಾಮಾನ್ಯ ವೈದ್ಯಕೀಯ ಬೆಡ್‌ಗಳು ಹಾಗೂ 20 ಸಾವಿರ ಐ.ಸಿ.ಯು. ಬೆಡ್‌ಗಳನ್ನು ನಿರ್ಮಿಸಲಾಗುವುದು. ಇವುಗಳಲ್ಲಿ ಶೇ.20 ಮಕ್ಕಳಿಗೆ ವಿಶೇಷವಾಗಿ ಲಭ್ಯವಾಗಲಿವೆ ಎಂದು ಮಾಂಡವೀಯ ತಿಳಿಸಿದ್ದಾರೆ.

ಆಕ್ಸಿಜನ್ ಹಾಗೂ ಔಷಧಿಗಳ ದಾಸ್ತಾನಿಗೆ ಜಿಲ್ಲಾ ಮಟ್ಟದಲ್ಲಿ ಯೋಜನೆ ರೂಪಿಸಲಾಗುವುದು. ಕೊರೊನಾ ಆರಂಭಿಕ ಹಂತದಲ್ಲೇ ಗುರುತಿಸಿ ಚಿಕಿತ್ಸೆ ಕೊಡಿಸಲು ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದವರು ಹೇಳಿದ್ದಾರೆ.

## 721 ಕೋ. ಬೆಂಬಲ ಬೆಲೆ ಬಾಕಿ ಶೀಘ್ರ ಪಾವತಿ

ಬೆಂಗಳೂರು, ಜು. 8 - ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ 4-5 ತಿಂಗಳ ಹಿಂದೆ ಖರೀದಿ ಮಾಡಲಾಗಿದ್ದ ರಾಗಿ, ಭತ್ತ ಹಾಗೂ ಜೋಳದ ಬಾಕಿ ಹಣ ಸುಮಾರು 721 ಕೋಟಿ ರೂಪಾಯಿಯಷ್ಟಿದ್ದು, ಇದನ್ನು ಇನ್ನು 2-3 ದಿನಗಳಲ್ಲಿ ಪಾವತಿಸುವುದಾಗಿ ಸಹಕಾರ ಸಚಿವರು ಹಾಗೂ ಸಚಿವ ಸಂಪುಟ ಉಪ ಸಮಿತಿ ಅಧ್ಯಕ್ಷ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಸಚಿವ ಸಂಪುಟ ಉಪ ಸಮಿತಿ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಲ್ಕೈದು ತಿಂಗಳ ಹಿಂದೆಯೇ ರಾಗಿ, ಭತ್ತ ಹಾಗೂ ಜೋಳವನ್ನು ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಖರೀದಿ ಮಾಡಲಾಗಿತ್ತು. ಆದರೆ, ಬೆಂಬಲ ಬೆಲೆ ಹಣ ಬಿಡುಗಡೆಯಾಗದೆ ಸಮಸ್ಯೆಯಾಗುತ್ತಿದೆ. ಕೂಡಲೇ ಬಾಕಿ ಹಣವನ್ನು ಪಾವತಿಸುವಂತೆ ಒತ್ತಡಗಳು ಬರುತ್ತಿದ್ದವು. ಇದೀಗ ಬಾಕಿ 721 ಕೋಟಿ ರೂಪಾಯಿಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಲು ಆದೇಶ ನೀಡಿದ್ದು, ಇನ್ನು 2-3 ದಿನಗಳಲ್ಲಿ ರೈತರ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಖರೀದಿ ಪ್ರಕ್ರಿಯೆ ಮತ್ತು ರೈತರಿಗೆ ಹಣ ಪಾವತಿಸುವ ಸಂಬಂಧ ಆಗುತ್ತಿರುವ ವಿಳಂಬವನ್ನು ತಪ್ಪಿಸುವ ಉದ್ದೇಶವನ್ನು ಹೊಂದಿದ್ದೇವೆ. ಈ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ತೆಗೆದುಕೊಳ್ಳಬೇಕಾದ ಕ್ರಮಗಳು ಸಾಕಷ್ಟಿದ್ದು, ಅವುಗಳ ಸಂಬಂಧ ಚರ್ಚೆ ನಡೆಸುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಮುಂದಿನ ಸಾಲಿನಲ್ಲಿ ಅಂದರೆ 2021-22ನೇ ಸಾಲಿನಲ್ಲಿ ಇಂತಹ ಸಮಸ್ಯೆಗಳು ತಲೆದೋರದಿರುವಂತೆ ಮಾಡಲು ಏನೆಲ್ಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು? ಏನು ಮಾಡಬಹುದು ಎಂಬಿತ್ಯಾದಿ ವಿಷಯಗಳ ಬಗ್ಗೆ ಸಚಿವ ಸಂಪುಟ ಉಪ ಸಮಿತಿ (3ನೇ ಪುಟಕ್ಕೆ)

## ಯಡಿಯೂರಪ್ಪ ವಿರುದ್ಧದ ಖಾಸಗಿ ದೂರು ವಜಾ

ಬೆಂಗಳೂರು, ಜು. 8 - ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ



ಬಿ.ಎಸ್. ಯಡಿಯೂರಪ್ಪ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಸಲ್ಲಿಸಿದ್ದ ಖಾಸಗಿ ದೂರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಾಹಂ (2ನೇ ಪುಟಕ್ಕೆ)

## 28 ಪಾಸಿಟಿವ್ 91 ಗುಣಮುಖ

ದಾವಣಗೆರೆ, ಜು.8- ಜಿಲ್ಲೆಯಲ್ಲಿ ಗುರುವಾರ 28 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 4 ಜನರು ಮೃತಪಟ್ಟಿದ್ದಾರೆ. 91 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 15, ಹರಿಹರ 3, ಚನ್ನಗಿರಿ 5, ಹೊನ್ನಾಳಿ ತಾಲ್ಲೂಕಿನ 4 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 660 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 573 ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

**ಭದ್ರಾ ಜಲಾಶಯ**

ಇಂದಿನ ಮಟ್ಟ : 155 ಅಡಿ 8 ಇಂಚು
ಒಳ ಹರಿವು: 1759 ಕ್ಯೂಸೆಕ್ಸ್
ಹೊರ ಹರಿವು : 81 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 144.5 ಅಡಿ

## ಎಪಿಎಂಸಿ ಮಂಡಿಗಳು ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಕೇಂದ್ರ ಸರ್ಕಾರದಿಂದ ಮೂಲಭೂತ ಸೌಲಭ್ಯ ನಿಧಿ

ನವದೆಹಲಿ ಜು. 8 – ಎ.ಪಿ.ಎಂ.ಸಿ. ಮಂಡಿಗಳು ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಹಾಗೂ ರೈತರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಲು 1 ಲಕ್ಷ ಕೋಟಿ ರೂ.ಗಳ ಮೂಲಭೂತ ಸೌಲಭ್ಯ ನಿಧಿ ಪಡೆಯಬಹುದು ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ತಿಳಿಸಿದ್ದಾರೆ.

ಸರ್ಕಾರ ತೆಗೆದುಕೊಂಡಿರುವ ಈ ನಿರ್ಧಾರದಿಂದ ಎ.ಪಿ.ಎಂ.ಸಿ.ಗಳು ಮತ್ತಷ್ಟು ಬಲವಾಗಲಿವೆ. ನೂತನ ಕೃಷಿ ಕಾಯ್ದೆಗಳ ಜಾರಿ ನಂತರ ಎಪಿಎಂಸಿ ರದ್ದಾಗಲಿದೆ ಎಂಬ ಭೀತಿ ನಿವಾರಣೆಯಾಗಲಿದೆ ಎಂದವರು ಹೇಳಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಕೇಂದ್ರದ ಯೋಜನೆಯನ್ನು ಮಾರ್ಪಡಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸಂಪುಟದ ನಿರ್ಧಾರದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿರುವ ತೋಮರ್, ಎ.ಪಿ.ಎಂ.ಸಿ. ಮುಚ್ಚುವುದಿಲ್ಲ ಎಂದು ಬಜೆಟ್ ವೇಳೆ ತಿಳಿಸಲಾಗಿತ್ತು. ಎ.ಪಿ.ಎಂ.ಸಿ.ಗಳನ್ನು ಬಲಗೊಳಿಸುವ ಸಲುವಾಗಿ ಅವುಗಳು ಕೃಷಿ ಮೂಲಭೂತ ಸೌಲಭ್ ನಿಧಿ (ಎ.ಐ.ಎಫ್.) ಅಡಿ 1 ಲಕ್ಷ ಕೋಟಿ ರೂ.ಗಳ ಹಣಕಾಸು ನೆರವು ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಎಪಿಎಂಸಿ ಮುಚ್ಚಲಾಗುವುದು ಎಂಬ ಭೀತಿ ಇತ್ತು. ಆದರೆ, ಈ ಮಂಡಿಗಳು ಮುಚ್ಚುವುದಿಲ್ಲ. ಮೂಲಭೂತ ಸೌಲಭ್ಯ ನಿಧಿಯಿಂದ ಹಣ ಪಡೆಯಲಿವೆ ಎಂದವರು ಹೇಳಿದ್ದಾರೆ. ಶೀತಲ ಘಟಕ, ವಿಲೇವಾರಿ, ಗ್ರೇಡಿಂಗ್ ಮತ್ತು ಉಗ್ರಾಣಗಳನ್ನು ನಿರ್ಮಿಸಲು 2 ಕೋಟಿ ರೂ.ಗಳವರೆಗೆ ಬಡ್ಡಿ ವಿನಾಯಿತಿಯ ಸಾಲ ನೀಡಲಾಗುವುದು ಎಂದವರು ಹೇಳಿದ್ದಾರೆ.

ಎ.ಪಿ.ಎಂ.ಸಿ.ಗಳಷ್ಟೇ ಅಲ್ಲದೇ, ರಾಜ್ಯ, ರಾಷ್ಟ್ರ ಹಾಗೂ ರಾಜ್ಯ ಒಕ್ಕೂಟಗಳು, ರೈತ ಉತ್ಪಾದಕರ ಒಕ್ಕೂಟಗಳು, ಸ್ವಸಹಾಯ ಸಂಘಗಳಿಗೂ ಹಣಕಾಸು ನೆರವು ಈ ಯೋಜನೆಯಡಿ ಲಭ್ಯವಾಗಲಿದೆ ಎಂದವರು ಹೇಳಿದ್ದಾರೆ.

ವ್ಯಕ್ತಿಗಳು, ಸಂಘಟನೆಗಳು, ಸಹಕಾರಿಗಳು, ಎಫ್.ಪಿ.ಓ. ಹಾಗೂ ಕೃಷಿ ನವೋದ್ಯಮಗಳು ಮತ್ತು ರೈತ ಒಕ್ಕೂಟಗಳು 2 ಕೋಟಿ ರೂ. ಗಳವರೆಗಿನ ಸಾಲ ಪಡೆದಾಗ ಶೇ.3ರ ವಾರ್ಷಿಕ ಬಡ್ಡಿ (3ನೇ ಪುಟಕ್ಕೆ)

## ಕಾಂಗ್ರೆಸ್ ಮುಖಂಡರ ಆರೋಪ ಸತ್ಯಕ್ಕೆ ದೂರ: ಮೇಯರ್ ಸ್ಪಷ್ಟನೆ

ದಾವಣಗೆರೆ, ಜು.8- ಪಾಲಿಕೆ ವತಿಯಿಂದ ಅಕ್ರಮವಾಗಿ ಬಡಾವಣೆ ನಿರ್ಮಿಸಲಾಗಿದೆ ಎಂಬ ಕಾಂಗ್ರೆಸ್ ಮುಖಂಡರ ಆರೋಪ ಸತ್ಯಕ್ಕೆ ದೂರವಾದುದು. ಪಾಲಿಕೆ ವ್ಯಾಪ್ತಿಯಲ್ಲಿ ಯಾವ ಬಡಾವಣೆಗಳನ್ನೂ ಅಕ್ರಮವಾಗಿ ನಿರ್ಮಾಣ ಮಾಡಿಲ್ಲವೆಂದು ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಸ್ಪಷ್ಟಪಡಿಸಿದ್ದಾರೆ.



ಪಾಲಿಕೆ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡಾವಣೆಗಳನ್ನು ಅಭಿವೃದ್ಧಿಪಡಿಸುವುದು, ಪರಿಶೀಲಿಸುವುದು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಕೆಲಸ, ಅದರಂತೆ ಬೆಸ್ಕಾಂ, ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆ, ಲೋಕೋಪಯೋಗಿ ಇಲಾಖೆಗಳು ಸ್ಥಳ ಪರಿಶೀಲಿಸಿದ ನಂತರ ಅಂತಿಮವಾಗಿ ಬಡಾವಣೆಗಳನ್ನು ನಿರ್ವಹಣೆ ಮಾಡುವ ಜವಾಬ್ದಾರಿ ಪಾಲಿಕೆಗೆ ಇರುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಪಾಲಿಕೆ ಸದಸ್ಯರು ಹೇಳುವಂತೆ ಯಾವುದೇ ಅಕ್ರಮ ನಡೆದಿಲ್ಲ. ಆ ರೀತಿ ನಡೆದಿದ್ದರೆ ಸೂಕ್ತ ದಾಖಲೆಗಳನ್ನು ಒದಗಿಸಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ವೀರೇಶ್ ತಿಳಿಸಿದರು.

ಅಧಿಕಾರವಿಲ್ಲದ ಕಾರಣ ವಿಚಲಿತರಾಗಿ ಬಿಜೆಪಿ ಮುಖಂಡರ, ಪಾಲಿಕೆ ಸದಸ್ಯರ ವಿರುದ್ಧ ಆರೋಪ ಮಾಡುತ್ತಾ ಬಿಟ್ಟಿ ಪ್ರಚಾರದಲ್ಲಿ (3ನೇ ಪುಟಕ್ಕೆ)

## ಕೃಷಿ ಕಾಯ್ದೆಗಳ ಲಾಭಗಳ ಬಗ್ಗೆ ರೈತರ ಮನವೊಲಿಕೆ

ನವದೆಹಲಿ, ಜು. 8 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳ ಲಾಭಗಳ ಕುರಿತು ದೇಶಾದ್ಯಂತ ರೈತರನ್ನು ತಲುಪಿ ಮನವೊಲಿಸುವುದಾಗಿ ಕೇಂದ್ರ ಕೃಷಿ ಖಾತೆ ಅಧೀನ ಸಚಿವೆ ಶೋಭ ಕರಂದ್ಲಾಜೆ ಹೇಳಿದ್ದಾರೆ.



ಪಂಜಾಬ್, ಹರಿಯಾಣ ಹಾಗೂ ಪಶ್ಚಿಮ ಉತ್ತರ ಪ್ರದೇಶದ ಹಲವಾರು ರೈತರು ದೆಹಲಿ ಗಡಿಗಳಲ್ಲಿ ಕಳೆದ ಏಳು ತಿಂಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

ರೈತ ಸಮುದಾಯದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಮೂರು ನೂತನ ಕಾಯ್ದೆಗಳನ್ನು ಜಾರಿಗೆ ತಂದಿದೆ. ಆದರೆ, ರಾಜಕೀಯ ಕಾರಣಕ್ಕಾಗಿ ಕಾಯ್ದೆಗಳನ್ನು ವಿರೋಧಿಸಲಾಗುತ್ತಿದೆ. ರೈತರಿಗೆ ಈ ಕಾಯ್ದೆಗಳ ಲಾಭಗಳ ಕುರಿತು ಮನವೊಲಿಸುವ ದೊಡ್ಡ ಜವಾಬ್ದಾರಿ (3ನೇ ಪುಟಕ್ಕೆ)

## ಜಾಲತಾಣ ತಿರುಚುವಿಕೆಯಿಂದ ಚುನಾವಣೆಗೆ ಅಪಾಯ : ಸುಪ್ರೀಂ

ನವದೆಹಲಿ ಜು. 8 – ಪ್ರಜಾಸತ್ತಾತ್ಮಕ ಸರ್ಕಾರಕ್ಕೆ ಚುನಾವಣೆ ಅಡಿಪಾಯ. ಅಂತಹ ಚುನಾವಣೆಗೆ ಸಾಮಾಜಿಕ ಮಾಧ್ಯಮ ಹಾಗೂ ಡಿಜಿಟಲ್ ಮಾಧ್ಯಮಗಳ ತಿರುಚುವಿಕೆಯಿಂದ ಅಪಾಯ ಎದುರಾಗಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಚುನಾವಣೆ ಹಾಗೂ ಮತದಾನ ಪ್ರಕ್ರಿಯೆ ಪ್ರಜಾಸತ್ತಾತ್ಮಕ ಸರ್ಕಾರದ ತಳಹದಿ. ಇದಕ್ಕೆ ಸಾಮಾಜಿಕ ಮಾಧ್ಯಮದ ತಿರುಚುವಿಕೆಯಿಂದ ಬೆದರಿಕೆ ಎದುರಾಗಿದೆ ಎಂದು ನ್ಯಾಯಾಲಯ ಹೇಳಿದೆ.

**ಫೇಸ್‌ಬುಕ್ ಹೊಣೆಗಾರಿಕೆಯಿಂದ ಹೊರತಾಗಿಲ್ಲ**

ಕಡಿಮೆ ತಿಳುವಳಿಕೆಯುಳ್ಳ ವ್ಯಕ್ತಿಗಳು ತಮ್ಮ ಸ್ನೇಹಿತರಿಂದ ಸಾಮಾಜಿಕ ಜಾಲತಾಣಗಳ ಮೂಲಕ ದೊರೆತ ಮಾಹಿತಿಯನ್ನು ಪರಿಶೀಲಿಸದೇ ನಂಬಬಹುದು. ಇಲ್ಲವೇ ಜನಪ್ರಿಯ ನಾಯಕರಿಂದ ಬರುವ ಮಾಹಿತಿಯನ್ನು ಸತ್ಯ ಎಂದೇ ಭಾವಿಸಬಹುದು ಎಂದು ನ್ಯಾಯಾಲಯ ತಿಳಿಸಿದೆ.

ಡಿಜಿಟಲ್ ಯುಗದಲ್ಲಿ ಮಾಹಿತಿ ಸ್ಫೋಟದಿಂದಾಗಿ ಹೊಸ ಸವಾಲುಗಳು ಎದುರಾಗಿವೆ. ಡಿಜಿಟಲ್ ವೇದಿಕೆಗಳನ್ನು ಈ ಕಾಲದಲ್ಲಿ ನಿಯಂತ್ರಿಸಲಾಗದು. ಇದು ಹೊಸ ಸವಾಲುಗಳನ್ನು ತಂದಿದೆ ಎಂದು ನ್ಯಾಯಾಲಯ ಹೇಳಿದೆ. ನಾಗರಿಕರು ಮಾಹಿತಿಯುಕ್ತ ನಿರ್ಧಾರ ತೆಗೆದುಕೊಂಡಾಗ ಮಾತ್ರ ಉದಾರವಾದಿ ಪ್ರಜಾಪ್ರಭುತ್ವ ಕಾರ್ಯ ನಿರ್ವಹಿಸಲು ಸಾಧ್ಯ ಎಂದು ನ್ಯಾಯಮೂರ್ತಿ ಎಸ್.ಕೆ. ಕೌಲ್ ನೇತೃತ್ವದ ಪೀಠ ಹೇಳಿದೆ.

ಸಾಮಾಜಿಕ ಜಾಲತಾಣಗಳು ಬೃಹತ್ತಾಗಿವೆ, ಅವುಗಳು (3ನೇ ಪುಟಕ್ಕೆ)

## ಪ್ಯಾರಿಸ್‌ನಲ್ಲಿರುವ ಭಾರತದ ಆಸ್ತಿಗಳ ಜಪ್ತಿಗೆ ಆದೇಶ

ನವದೆಹಲಿ, ಜು. 8 – ಪೂರ್ವಾನ್ವಯ ತೆರಿಗೆ ರದ್ದುಗೊಳಿಸಿದ ಮಧ್ಯಸ್ಥಿಕೆ ನ್ಯಾಯಾಲಯವೊಂದರ ತೀರ್ಪಿನ ಅನ್ವಯ, 1.72 ಶತಕೋಟಿ ಡಾಲರ್ ಬಾಕಿ ವಸೂಲಿಗಾಗಿ ಪ್ಯಾರಿಸ್‌ನಲ್ಲಿರುವ ಭಾರತದ 20 ಆಸ್ತಿಗಳ ಜಪ್ತಿಗೆ ಬ್ರಿಟನ್‌ನ ಕೇರ್ನ್ ಎನರ್ಜಿ ಪಿಕ್ ಕಂಪನಿಯು ನ್ಯಾಯಾಲಯದ ಆದೇಶ ಪಡೆದುಕೊಂಡಿದೆ.

**ಪ್ಯಾರಿಸ್‌ನಲ್ಲಿವೆ ಭಾರತದ 20 ಆಸ್ತಿಗಳು**

20 ಆಸ್ತಿಗಳಲ್ಲಿ ಬಹುತೇಕವು ಫ್ಲಾಟ್‌ಗಳಾಗಿವೆ. ಇವುಗಳ ಮೌಲ್ಯ 20 ದಶಲಕ್ಷ ಯೂರೋ ಎಂದು ಅಂದಾಜಿಸಲಾಗಿದೆ. ಇವುಗಳನ್ನು ಫ್ರಾನ್ಸ್‌ನಲ್ಲಿ ಸರ್ಕಾರಿ ಉದ್ದೇಶಕ್ಕಾಗಿ ಬಳಸಿಕೊಳ್ಳಗುತ್ತಿದೆ ಎಂದು ಮೂಲಗಳು ಹೇಳಿವೆ.

ಜೂನ್ 11ರಂದು ಪ್ಯಾರಿಸ್ ನಲ್ಲಿರುವ ಟ್ರಿಬ್ಯೂನಲ್ ಈ ಬಗ್ಗೆ ಆದೇಶ ಹೊರಡಿಸಿದೆ. ಕಳೆದ ಬುಧವಾರ ಸಂಜೆ ಈ ಕುರಿತ ಕಾನೂನು ಔಪಚಾರಿಕತೆ ಪೂರ್ಣಗೊಳಿಸಲಾಗಿದೆ ಎನ್ನಲಾಗುತ್ತಿದೆ.ಕೋರ್ಟ್ ಆದೇಶದ (3ನೇ ಪುಟಕ್ಕೆ)

## ಜಿ.ಪಂ. ಕ್ಷೇತ್ರಗಳ ಮೀಸಲಿಗೆ ಭಾರೀ ಆಕ್ಷೇಪಣೆ

ಜಿಗಳಿ ಪ್ರಕಾಶ್

ಮಲೇಬೆನ್ನೂರು, ಜು.8- ಜಿ.ಪಂ, ತಾ.ಪಂ ಕ್ಷೇತ್ರಗಳ ಮೀಸಲಾತಿ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಚುನಾವಣಾ ಆಯೋಗ ನೀಡಿದ್ದ ಕಾಲಾವಕಾಶ ಗುರುವಾರ ಕೊನೆಯ ದಿನವಾಗಿತ್ತು.

ದಾವಣಗೆರೆ ಜಿಲ್ಲೆಯ ಅನೇಕ ಜಿ.ಪಂ. ಕ್ಷೇತ್ರಗಳಲ್ಲಿ ಈಗ ಪ್ರಕಟಿಸಿರುವ ಮೀಸಲಾತಿಗೆ ಸಾಕಷ್ಟು ಆಕ್ಷೇಪಣೆಗಳು ಸಲ್ಲಿಕೆಯಾಗಿವೆ ಎಂದು ಹೇಳಲಾಗಿದೆ. ಹರಿಹರ ತಾಲ್ಲೂಕಿನ ಭಾನುವಳ್ಳಿ ಜಿ.ಪಂ ಕ್ಷೇತ್ರ ಎಸ್ಸಿ ಮೀಸಲು ಆಗಿದ್ದು, ಇದನ್ನು ಬಿಸಿಎಂ 'ಎ' ಅಥವಾ ಎಸ್ಟಿ ಮಾಡಬೇಕೆಂದು ಆಕ್ಷೇಪಣೆ ಸಲ್ಲಿಸಿದ್ದಾರೆ.

ಹೊಸ ಜಿ.ಪಂ ಕ್ಷೇತ್ರವಾಗಿರುವ ಕುಂಬಳೂರು ಈಗ ಸಾಮಾನ್ಯವಾಗಿದ್ದು, ಇದನ್ನು ಎಸ್ಸಿ ಮಾಡಬೇಕೆಂದು ಕೆಲವರು, ಬಿಸಿಎಂ 'ಎ' ಮಾಡಬೇಕೆಂದು ಮತ್ತೆ ಕೆಲವರು ಆಕ್ಷೇಪಣೆ ಸಲ್ಲಿಸಿದ್ದಾರೆ.

**ಹರಿಹರ ತಾ.ನಲ್ಲಿ 3 ತಾ.ಪಂ. ಕ್ಷೇತ್ರಗಳು ರದ್ದು, ಜಿ.ಪಂ. ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಿಗದ ಅವಕಾಶ**

ಭಾನುವಳ್ಳಿ ಜಿ.ಪಂ ಕ್ಷೇತ್ರ ಈ ಹಿಂದೆ ನಾಲ್ಕು ಬಾರಿ ಸಾಮಾನ್ಯ ಮತ್ತು 2 ಬಾರಿ ಎಸ್ಸಿ ಮೀಸಲು ಆಗಿತ್ತು. ಆದರೆ, ಇದುವರೆಗೂ ಬಿಸಿಎಂ 'ಎ' ಅಥವಾ ಎಸ್ಟಿ ಬಂದಿಲ್ಲ ಎಂಬುದು ಕ್ಷೇತ್ರದ ಹಲವರ ಅಭಿಪ್ರಾಯವಾಗಿದೆ.

ಹಿಂದುಳಿದ ಮತಗಳು ಹೆಚ್ಚಾಗಿರುವ ಕುಂಬಳೂರು ಜಿ.ಪಂ. ಕ್ಷೇತ್ರವನ್ನು ಬಿಸಿಎಂ 'ಎ' ಮಾಡಬೇಕೆಂದು ಕೇಳಿದ್ದಾರೆಂದು ಹೇಳಲಾಗಿದೆ.

ಹೊಳೆಸಿರಿಗೆರೆ, ಬೆಳ್ಳೂಡಿ ಜಿ.ಪಂ ಕ್ಷೇತ್ರಗಳು ಸಾಮಾನ್ಯವಾಗಿದ್ದು, ಈ ಕ್ಷೇತ್ರಗಳಲ್ಲಿ ಆಕ್ಷೇಪಣೆ ಸಲ್ಲಿಕೆ ಆಗಿರುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಕೊಂಡಜ್ಜಿ ಜಿ.ಪಂ. ಕ್ಷೇತ್ರ ಎಸ್ಟಿ ಆಗಿದ್ದು, ಇಲ್ಲಿಯೂ ಸಹ ಯಾವುದೇ ಆಕ್ಷೇಪಣೆ ಆಗಿಲ್ಲ ಎನ್ನಲಾಗಿದೆ.

ವಿಶೇಷ ಎಂದರೆ, ಹರಿಹರ ತಾಲ್ಲೂಕಿನ 5 ಜಿ.ಪಂ. ಕ್ಷೇತ್ರಗಳಲ್ಲಿ ಈ ಬಾರಿ ಒಂದು ಕ್ಷೇತ್ರವೂ ಮಹಿಳೆಯರಿಗೆ ಮೀಸಲಾಗಿಲ್ಲ. ಈ ಬಗ್ಗೆ ಮಹಿಳೆಯರೂ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಆದರೆ, ಚುನಾವಣಾ ಆಯೋಗಕ್ಕೆ ಆಕ್ಷೇಪಣೆ ಅರ್ಜಿ ಸಲ್ಲಿಸಿರುವ ಬಗ್ಗೆ ಮಾಹಿತಿ ಗೊತ್ತಾಗಿಲ್ಲ.

**3 ತಾ.ಪಂ.ಕ್ಷೇತ್ರ ರದ್ದು :** ಹರಿಹರ ತಾಲ್ಲೂಕಿನಲ್ಲಿ ಇದುವರಿಗೆ 15 ತಾ.ಪಂ. ಕ್ಷೇತ್ರಗಳಿದ್ದವು. ಈ ಬಾರಿ (3ನೇ ಪುಟಕ್ಕೆ)

## ಎಲ್ಲಾ ರಂಗಗಳಲ್ಲೂ ಖಾಸಗೀಕರಣದಿಂದ ಲೂಟಿ ಮಾಡುತ್ತಿರುವ ಬಿಜೆಪಿ ಸರ್ಕಾರ

ಹರಪನಹಳ್ಳಿ, ಜು.8- ಬಿಜೆಪಿ ಸರ್ಕಾರ ಎಲ್ಲ ರಂಗದಲ್ಲಿ ಖಾಸಗೀಕರಣ ಮಾಡುವ ಮೂಲಕ ಹಣ ಲೂಟಿ ಮಾಡುತ್ತಿದ್ದು, ಯುವ ಜನತೆಗೆ ಕೆಲಸವಿಲ್ಲದೆ ನಿರುದ್ಯೋಗದ ಸಮಸ್ಯೆ ತಾಂಡವಾಡುತ್ತಿದೆ ಎಂದು ಮಾಜಿ ಸಚಿವ ಯು.ಟಿ. ಖಾದರ್ ಆರೋಪಿಸಿದ್ದಾರೆ.

ಹರಪನಹಳ್ಳಿ ತಾಲ್ಲೂಕು ಕಾಂಗ್ರೆಸ್ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವ ಯು.ಟಿ. ಖಾದರ್



ಪಟ್ಟಣದ ಬೈಪಾಸ್ ರಸ್ತೆಯ ಬಣಗೇರಿ ಬಳಿ ತಾಲ್ಲೂಕು ಕಾಂಗ್ರೆಸ್ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಿಜೆಪಿಯವರಿಗೆ ಪ್ರಚಾರದ ಹುಚ್ಚು ಹಿಡಿದಿದೆ. ಉತ್ತಮ ಕೆಲಸ ಮಾಡಲು ಅವರಿಗಾಗದು. ಪೆಟ್ರೋಲ್, ಡೀಸೆಲ್, ಗ್ಯಾಸ್ ದರ ಹೆಚ್ಚಳ ಮಾಡುವ ಮೂಲಕ ಕೇಂದ್ರ ಸರ್ಕಾರ ಹಣ ಲೂಟಿ ಮಾಡುವ ಶೇವ್ ಇಂಡಿಯಾ (3ನೇ ಪುಟಕ್ಕೆ)

# ವೈದ್ಯಕೀಯ ಕಾಲೇಜು ಹೋರಾಟಕ್ಕೆ ಬಿಜೆಪಿ ಬೆಂಬಲ



## ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ

ಹರಿಹರ, ಜು.8- ನಗರದಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಮೊದಲ ಹಂತವಾಗಿ ಸಹಿ ಸಂಗ್ರಹ ಅಭಿಯಾನದ ಹೋರಾಟ ಮಾಡುತ್ತಿರುವುದಕ್ಕೆ ಬಿಜೆಪಿಯಿಂದ ಬೆಂಬಲ ನೀಡುವುದರೊಂದಿಗೆ ಸಂಪೂರ್ಣ ಸಹಕಾರ ಇರುತ್ತದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ತಿಳಿಸಿದ್ದಾರೆ.

ಇಲ್ಲಿನ ಗಾಂಧಿ ವೃತ್ತದಲ್ಲಿ ನಗರದಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭ ಮಾಡುವಂತೆ ಹಮ್ಮಿಕೊಂಡಿರುವ ಸಹಿ ಸಂಗ್ರಹ ಅಭಿಯಾನದಲ್ಲಿ ಅವರು ಪಾಲ್ಗೊಂಡು ಮಾಧ್ಯಮದವರೊಂದಿಗೆ ಮಾತನಾಡಿದರು.

ಸಹಸ್ರಾರು ಜನತೆಗೆ ಅನ್ನವನ್ನು ನೀಡುತ್ತಿದ್ದ ಮೈಸೂರು ಕಿರ್ಲೋಸ್ಕರ್ ಕಂಪನಿಯು ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದ್ದರಿಂದ ಇಲ್ಲಿನ ಜನತೆ ಆರ್ಥಿಕವಾಗಿ ಸಾಕಷ್ಟು ತೊಂದರೆ ಅನುಭವಿಸಿದರು. ಹರಿಹರ ನಗರವು ಭೌಗೋಳಿಕವಾಗಿ ಎಲ್ಲಾ ರೀತಿಯಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭಿಸಲು ಸೂಕ್ತವಾಗಿದೆ. ನಾಳೆ ದಿನಾಂಕ 9 ರಂದು ದಾವಣಗೆರೆಗೆ ವೈದ್ಯಕೀಯ ಸಚಿವ ಸುಧಾಕರ್ ಆಗಮಿಸಲಿದ್ದು, ಅವರ ಗಮನಕ್ಕೆ ತರಲಾಗುವುದು ಎಂದು ಅವರು ಹೇಳಿದರು.

ಹರಿಹರ ತಾಲ್ಲೂಕಿನ ಜಿ.ಪಂ. ಮತ್ತು ತಾ.ಪಂ. ಸದಸ್ಯರ ಚುನಾವಣೆ ಮೀಸಲಾತಿ ವಿಚಾರದಲ್ಲಿ ರಾಜ್ಯ ಚುನಾವಣಾ ಆಯೋಗ ಎಲ್ಲಾ ವರ್ಗದವರ ಮಾನದಂಡಗಳನ್ನು ನೋಡಿ ಮೀಸಲಾತಿ ಪಟ್ಟಿಯನ್ನು ಸಿದ್ಧತೆ ಮಾಡಿರುತ್ತದೆ. ಶಾಸಕ ಎಸ್. ರಾಮಪ್ಪ ಪಟ್ಟಿಯಲ್ಲಿ ದೋಷವಿದೆ ಎಂದು ಹೇಳಿದ್ದಾರೆ. ಅವರು ಅದನ್ನು ಪಕ್ಷದ ವತಿಯಿಂದ ಸಿದ್ಧತೆ ಮಾಡಿದ್ದಾರೆ ಎಂದು ಭಾವಿಸಿರಬಹುದು. ಯಾವ ಇಲಾಖೆಯಲ್ಲಿ ಪಟ್ಟಿ ಸಿದ್ದತೆ ಮಾಡುತ್ತಾರೆ ಎನ್ನುವುದನ್ನು ಮೊದಲು ಅರಿತುಕೊಂಡು ಮಾತನಾಡಲಿ ಎಂದು ವೀರೇಶ್ ಅವರು ಹೇಳಿದರು.

ಈ ಸಂದರ್ಭದಲ್ಲಿ ಸಹಿ ಸಂಗ್ರಹ ಅಭಿಯಾನದ ಎನ್.ಹೆಚ್. ಶ್ರೀನಿವಾಸ್ ನಂದಿಗಾವಿ, ಮಾಜಿ ದೂಡಾ ಸದಸ್ಯ ಹೆಚ್. ನಿಜಗುಣ, ಕಾರ್ಮಿಕ ಮುಖಂಡ ಹೆಚ್. ಕೆ. ಕೊಟ್ರಪ್ಪ, ತಪೋವನ ಮಾಲೀಕ ಶಶಿಕುಮಾರ್, ನಗರಸಭೆ ಸದಸ್ಯ ವಿಜಯಕುಮಾರ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಉಪಾಧ್ಯಕ್ಷ ತುಳಜಪ್ಪ ಭೂತೆ, ರಾಘವೇಂದ್ರ, ರೂಪಾ ಕಾಟ್ವೆ, ಪ್ರಮೀಳಾ ನಲ್ಲೂರು, ಸುಧಾ ಸಾಳಂಕಿ, ರಶ್ಮಿ, ಶಾಂತಾಬಾಯಿ, ಕೆ.ಜಿ. ಕೃಷ್ಣ, ಗಿರೀಶ್, ಶ್ರೀಧರ್, ಆದಿತ್ಯ, ಬೆಣ್ಣೆ ವಿಜಯಕುಮಾರ್, ರುದ್ರೇಗೌಡ, ನಾಗೇಂದ್ರಪ್ಪ ಇನ್ನಿತರರಿದ್ದರು.

## ಮಾಜಿ ಸಿಎಂ ಸಿಂಗ್ ನಿಧನ

ಶಿಮ್ಲಾ, ಜು. 8 – ಆರು ಬಾರಿ ಹಿಮಾಚಲ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಕಾಂಗ್ರೆಸ್ ಹಿರಿಯ ನಾಯಕ ವೀರಭದ್ರಸಿಂಗ್ (87) ಸುದೀರ್ಘ ಅಸ್ವಸ್ಥತೆಯ ನಂತರ ಇಂದು ನಿಧನರಾಗಿದ್ದಾರೆ.

## ಬಿ.ಜಿ. ನಾಗರಾಜ್ ಪತ್ನಿ ಶಶಿಕಲಾ ನಿಧನ



ದಾವಣಗೆರೆ, ಜು. 8 - ನಗರದ ಡಿ.ಆರ್.ಎಂ. ಕಾಲೇಜಿನ ನಿವೃತ್ತ ಪ್ರಾಂಶುಪಾಲ ಹಾಗೂ ವಿಚಾರವಾದಿಯಾಗಿದ್ದ ದಿ. ಬಿ.ಜಿ. ನಾಗರಾಜ್ ಅವರ ಪತ್ನಿ ಶ್ರೀಮತಿ ಎಂ.ಜಿ. ಶಶಿಕಲಾ ಅವರು ಇಂದು ಬೆಳಿಗ್ಗೆ 6 ಕ್ಕೆ ನಿಧನರಾಗಿದ್ದಾರೆ. ಅವರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು.

ಅವರು ಹೃದಯ ರೋಗದಿಂದ ಕೊನೆಯುಸಿರೆಳೆದಿದ್ದಾರೆ. ಕಳೆದ ತಿಂಗಳ ಹಿಂದೆ ಬಿ.ಜಿ. ನಾಗರಾಜ್ ಅವರು ನಿಧನರಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಶಶಿಕಲಾ ಅವರು, ಮಗಳು ಪ್ರೀತಿ ನಾಗರಾಜ್, ಅಳಿಯ ಸುದರ್ಶನ ಪಾಟೀಲ್ ಕುಲಕರ್ಣಿ, ಮೊಮ್ಮಕ್ಕಳಾದ ಲಿಪಿ, ಗೌರಿ ಅವರನ್ನು ಅಗಲಿದ್ದಾರೆ. ಶಾಮನೂರು ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಯಿತು.

# ತೈಲ ಬೆಲೆ ಏರಿಕೆ : ಜಗಳೂರಿನಲ್ಲಿ ಕಾಂಗ್ರೆಸ್ ಪ್ರತಿಭಟನೆ



ಜಗಳೂರು, ಜು.8- ಪೆಟ್ರೋಲ್ ಡೀಸೆಲ್ ದರ ಏರಿಕೆಯನ್ನು ಖಂಡಿಸಿ ಸೈಕಲ್ ಜಾಥಾ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಸೈಕಲ್ ಜಾಥಾ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮಹಾತ್ಮಗಾಂಧಿ ವೃತ್ತ, ದಾವಣಗೆರೆ ರಸ್ತೆ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ಸಾಗಿತು.

ಈ ಸಂದರ್ಭದಲ್ಲಿ ಮಾತನಾಡಿದ ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ದೇಶವ್ಯಾಪಿ ರೈತರು ಬಿತ್ತನೆಗೆ ಟ್ರ್ಯಾಕ್ಟರ್‌ಗಳನ್ನೇ ಅವಲಂಬಿಸಿದ್ದು, ಡೀಸೆಲ್ ಬೆಲೆ ಏರಿಕೆಯಿಂದ ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ತಾಲ್ಲೂಕು ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್ ಮಾತನಾಡಿ, ದೇಶದಲ್ಲಿ ರೈತ ಕಾರ್ಮಿಕ ವರ್ಗದವರೇ ಶೇ. 70 ರಷ್ಟಿದ್ದು, ಕೋವಿಡ್‌ನಿಂದ ತತ್ತರಿಸಿ ಆರ್ಥಿಕ ಸಂಕಷ್ಟದಿಂದ ನಲುಗುತ್ತಿದ್ದಾರೆ. ಈ ಮಧ್ಯೆ ಅಗತ್ಯ ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡಿರುವುದು ಬಡ ಕೂಲಿ ಕಾರ್ಮಿಕರ ಬದುಕು ದುಸ್ತರವಾಗಿದೆ ಎಂದರು.

ಎಸ್‌ಟಿ ಘಟಕದ ಸಿ. ತಿಪ್ಪೇಸ್ವಾಮಿ ಮಾತನಾಡಿ, ತಾಲ್ಲೂಕಿನಲ್ಲಿ ಹಿಂದುಳಿದ ದಲಿತ ವರ್ಗದವರೇ ಹೆಚ್ಚಾಗಿ ವಾಸಿಸುತ್ತಿದ್ದು, ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ವಿವಿಧ ಘಟಕಗಳ ಪದಾಧಿಕಾರಿಗಳಾದ ಬಿ. ಲೋಕೇಶ್, ತಿಪ್ಪೇಸ್ವಾಮಿ ಗೌಡ, ಅಹಮ್ಮದ್ ಅಲಿ, ಕೆಂಚಮ್ಮ, ತಿಪ್ಪೇಸ್ವಾಮಿ, ವಿಜಯ್ ಕೆಂಚೋಳ್, ರಾಜಪ್ಪ, ಶಿವಕುಮಾರ್, ಸಿದ್ದಪ್ಪ, ಮಾಳಮ್ಮನಹಳ್ಳಿ ವೆಂಕಟೇಶ್ ಇನ್ನಿತರರು ಭಾಗವಹಿಸಿದ್ದರು.

# ಕೆಲಸ ಮಾಡಲಾಗದಿದ್ದರೆ ಜಿಲ್ಲೆ ಬಿಟ್ಟು ತೊಲಗಿ

(1ನೇ ಪುಟದಿಂದ) ನೀರ್ಥಡಿ ಫ್ಲೈಓವರ್ ನಿರ್ಮಾಣ ಕಾಮಗಾರಿಗೆ ಹೆದ್ದಾರಿ ಪ್ರಾಧಿಕಾರ ಪತ್ರ ಕೊಡಬೇಕು. ಆಗ ಪೊಲೀಸ್ ರಕ್ಷಣೆಯೊಂದಿಗೆ ನಿರ್ಮಾಣ ಕಾಮಗಾರಿಗೆ ಜಮೀನು ಪಡೆಯಲು ಸಾಧ್ಯ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ಕರ್ನಾಟಕ ನೀರಾವರಿ ನಿಗಮ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಪೈಪ್‌ಗಳನ್ನು ಅಳವಡಿಸುವಾಗ ಹೆದ್ದಾರಿಗೆ ಧಕ್ಕೆ ತಂದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾಧಿಕಾರಿ ಬೀಳಗಿ, ಕಾಮಗಾರಿ ನಡೆಸುವಾಗ ಬೇರೆಯವರಿಗೆ ಧಕ್ಕೆ ಮಾಡಬಾರದು. ಇದರಿಂದ ಆಗಿರುವ ನಷ್ಟವನ್ನು ನಿಗಮವೇ ಭರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಶಾಸಕ ಹಾಗೂ ಲಿಡ್ಕರ್ ಅಧ್ಯಕ್ಷ ಪ್ರೊ. ಲಿಂಗಣ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ನೀರಾವರಿ ನಿಗಮದ ಮುಖ್ಯ ಅಭಿಯಂತರ ಯತೀಶ್ ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

## ಸಾಸ್ವೆಹಳ್ಳಿ ಏತ ನೀರಾವರಿ ವಿಳಂಬಕ್ಕೆ ಆಕ್ಷೇಪ



ಜಗಳೂರು ಹಾಗೂ ಭರಮಸಾಗರ ಏತ ನೀರಾವರಿ ಯೋಜನೆಗಳು ತ್ವರಿತವಾಗಿ ಸಾಗುತ್ತಿದ್ದರೂ, ಸಾಸ್ವೆಹಳ್ಳಿ ಏತ ನೀರಾವರಿ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ತರಾಟೆಗೆ ತೆಗೆದುಕೊಂಡಿದ್ದಾರೆ. ಯೋಜನೆ ವಿಳಂಬವಾಗಿ ಎರಡು ಬಾರಿ ಗುತ್ತಿಗೆ ಅವಧಿ ವಿಸ್ತರಿಸಲಾಗಿದೆ. ಇಷ್ಟಾದರೂ ಗುತ್ತಿಗೆ ಅವಧಿ ಜೂನ್ ತಿಂಗಳಿಗೆ ಪೂರ್ಣಗೊಂಡಿದೆ. ಡಿಸೆಂಬರ್ ಒಳಗೆ ಕಾಮಗಾರಿ ಪೂರ್ಣಗೊಳ್ಳಬೇಕು ಎಂದು ತಾಕೀತು ಮಾಡಿದರು.

ಜಗಳೂರು ಏತ ನೀರಾವರಿ ಕಾಮಗಾರಿಗೆ ಉತ್ತಮ ಗುಣಮಟ್ಟದ ಪೈಪ್‌ಗಳನ್ನು ಬಳಸಬೇಕು. 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಲ್ಲಿ ಪೈಪ್‌ಗಳ ಸಮಸ್ಯೆ ಎದುರಾದಂತೆ ಇಲ್ಲೂ ಸಮಸ್ಯೆ ಬರಲಿದೆ ಎಂದವರು ಎಚ್ಚರಿಸಿದರು.

ಭರಮಸಾಗರ ಏತ ನೀರಾವರಿ ಯೋಜನೆಯ ಎರಡನೇ ಹಂತದ ಕಾಮಗಾರಿ ಡಿಸೆಂಬರ್ ಒಳಗೆ ಪೂರ್ಣಗೊಳಿಸಬೇಕು. ಜಗಳೂರು ಏತ ನೀರಾವರಿಯ 31 ಕಿ.ಮೀ. ಪೈಪ್ ಅಳವಡಿಕೆ ಕಾಮಗಾರಿಯನ್ನು ಆಗಸ್ಟ್ ಒಳಗೆ ಮುಗಿಸಬೇಕು ಎಂದವರು ತಿಳಿಸಿದರು.

## ಯಡಿಯೂರಪ್ಪ ವಿರುದ್ಧದ ದೂರು ವಜಾ

(1ನೇ ಪುಟದಿಂದ) ಸಲ್ಲಿಸಿದ್ದ ಅರ್ಜಿಯ ವಾದ- ವಿವಾದವನ್ನು ಆಲಿಸಿ, ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಜಯಂತಕುಮಾರ್ ವಜಾಗೊಳಿಸಿ ಆದೇಶ ಹೊರಡಿಸಿದರು. ಸಿಎಂ ಯಡಿಯೂರಪ್ಪ ಸೇರಿದಂತೆ 9 ಮಂದಿ ವಿರುದ್ಧ ಖಾಸಗಿ ದೂರು ದಾಖಲಾಗಿತ್ತು. ಅಷ್ಟೇ ಅಲ್ಲ ಯಡಿಯೂರಪ್ಪ ವಿರುದ್ಧ ಪ್ರಾಸಿಕ್ಯೂಷನ್‌ಗೆ ಕೋರಿದ್ದ ಅರ್ಜಿಯನ್ನು ರಾಜ್ಯಪಾಲರು ನಿರಾಕರಿಸಿದ್ದಾರೆ.

# ಬಾಗಳಿ ಗ್ರಾಮಸ್ಥರಿಂದ ಪಂಚಾಯ್ತಿ ಚುನಾವಣೆ ಬಹಿಷ್ಕಾರದ ಎಚ್ಚರಿಕೆ

**ಹರಪನಹಳ್ಳಿ**

ಹರಪನಹಳ್ಳಿ, ಜು.8- ತಾಲ್ಲೂಕಿನ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳ ಪುನರ್ ವಿಂಗಡಣೆಯಾಗಿದ್ದು, ಬಾಗಳಿ ತಾ.ಪಂ. ಕ್ಷೇತ್ರ ಕೈಬಿಟ್ಟಿರುವುದಕ್ಕೆ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಾಲ್ಲೂಕಿನ ಬಾಗಳಿ ಗ್ರಾಮವು ತನ್ನದೇ ಆದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು ,ಪುರಾತನ ಕಾಲದ ಶ್ರೀ ಕಲ್ಲೇಶ್ವರ ದೇವಸ್ಥಾನ ಹಾಗೂ ಮ್ಯೂಸಿಯಂ ಒಳಗೊಂಡು ಅನೇಕ ದೇಗುಲಗಳು, ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವ ಗ್ರಾಮವಾಗಿದೆ. ಪಂಚಗಣಾಧೀಶರ ನೆಲೆಬೀಡಾಗಿದ್ದು, ಹಿಂದೆ ಅನೇಕ ಗ್ರಾಮಗಳನ್ನು ಒಳಗೊಂಡಿರುವ ಮಂಡಲ ಪಂಚಾಯ್ತಿ ಸಹ ಹೊಂದಿತ್ತು.

ಬಾಗಳಿಯನ್ನು ಜಿಲ್ಲಾ ಪಂಚಾಯ್ತಿ ಕ್ಷೇತ್ರವನ್ನಾಗಿಸಲು ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರವನ್ನು ಮುಂದುವರೆಸುವಂತೆ ಈ ಹಿಂದೆ ರಾಜ್ಯ ಚುನಾವಣಾಧಿಕಾರಿಗಳಿಗೆ, ಉಪವಿಭಾಗಾಧಿಕಾರಿಗಳಿಗೆ, ಸಚಿವರುಗಳಿಗೆ, ಶಾಸಕರಿಗೆ ಮನವಿ ಮಾಡಿಕೊಂಡರೂ ಯಾವುದೇ ಪ್ರಯೋಜನವಾಗಿಲ್ಲ. ಬಾಗಳಿ ಗ್ರಾಮವು ಹಿಂದೆ ತಾಲ್ಲೂಕು ಪಂಚಾಯಿತಿ ಕ್ಷೇತ್ರ ವಾಗಿದ್ದು, ಈಗ ಇದನ್ನು ಕೈಬಿಟ್ಟಿರುವು ದರಿಂದ ಗ್ರಾಮಸ್ಥರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೂಡಲೇ ಬಾಗಳಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರವನ್ನು ಮುಂದುವರೆಸಬೇಕು. ಹಾಗೂ ಈ ಗ್ರಾಮ ಒಳಗೊಂಡು ಜಿ.ಪಂ. ಕ್ಷೇತ್ರವನ್ನಾಗಿ ಘೋಷಣೆ ಮಾಡಬೇಕು. ಇಲ್ಲವಾದಲ್ಲಿ ಮುಂಬರುವ ಎಲ್ಲಾ ರೀತಿಯ ಚುನಾವಣೆಗಳನ್ನು ಬಹಿಷ್ಕರಿಸಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಸಿದ್ದಾರೆ.

ಗ್ರಾಮಸ್ಥರಾದ ಆರ್. ಶಿವಕುಮಾರ ಗೌಡ, ಬಿ.ಬಿ. ಹೊಸೂರಪ್ಪ, ಎನ್. ಮಂಜುನಾಥ್, ಬಣಕಾರ ಜಗದೀಶ, ಬಡಮರ ಭೀಮಪ್ಪ, ಎನ್.ಜಿ. ಸಿದ್ದಪ್ಪ, ಬಿ. ಗೋಣೆಪ್ಪ, ಆರ್. ನಿರಂಜನ್, ಎಂ. ಪರಮೇಶಪ್ಪ, ಹೊಳಲು ಮಂಜುನಾಥ, ಹನುಮಂತಪ್ಪ, ಕೊಟ್ರೇಶಪ್ಪ ಮತ್ತಿತರರು ತಿಳಿಸಿದ್ದಾರೆ.

## ರಾಣೇಬೆನ್ನೂರು : ಕಾಂಗ್ರೆಸ್‌ನಿಂದ ಸೈಕಲ್ ರ್‍ಯಾಲಿ



ರಾಣೇಬೆನ್ನೂರು, ಜು.8- ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಬೇಳೆಕಾಳು, ಎಣ್ಣೆ ಮುಂತಾದವುಗಳ ಬೆಲೆ ಏರಿಕೆಯನ್ನು ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶ ಕೋಳಿವಾಡ ನೇತೃತ್ವದಲ್ಲಿ ಸೈಕಲ್ ರ್‍ಯಾಲಿ ಮೂಲಕ ಇಂದು ಪ್ರತಿಭಟನೆ ನಡೆಸಲಾಯಿತು.

ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟ ರ್‍ಯಾಲಿ ಬಸ್ ನಿಲ್ದಾಣ, ಪೋಸ್ಟ್ ಸರ್ಕಲ್, ಎಂ.ಜಿ. ರಸ್ತೆ, ದರ್ಗಾ ಸರ್ಕಲ್, ಕುರುಬಗೇರಿ ಕ್ರಾಸ್, ಹಳೆ ರಾಷ್ಟ್ರೀಯ ಹೆದ್ದಾರಿ ಮೂಲಕ ತಹಶೀಲ್ದಾರ್ ಕಛೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು.

ವೀಕ್ಷಕ ವೆಂಕಟೇಶ್, ಮುಖಂಡರುಗಳಾದ ಮಂಜನಗೌಡ ಪಾಟೀಲ, ಶೇರು ಕಾಬೂಲಿ, ಏಕನಾಥ ಭಾನುವಳ್ಳಿ, ರವೀಂದ್ರಗೌಡ ಪಾಟೀಲ, ಪುಟ್ಟಪ್ಪ ಮರಿಯಮ್ಮನವರ, ನಿಂಗರಾಜ ಕೋಡಿಹಳ್ಳಿ, ಬಸನಗೌಡ ಮರದ, ಬಸವರಾಜ ಸವಣೂರ, ಬಸವರಾಜ ಹುಚ್ಚಗೊಂಡರ, ರಮೇಶ ಬಿಸಲಳ್ಳಿ, ಕಿರಣ್ ಮಾಂಡ್ರೆ, ಗುರು ಕಂಬಳಿ, ಕೃಷ್ಣಪ್ಪ ಕಂಬಳಿ, ಇರ್ಷಾದ್ ಬಳ್ಳಾರಿ ಇನ್ನಿತರರಿದ್ದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ದಿ|| ಶ್ರೀ ಚಲಸಾನಿ ಮುರುಳಿಕೃಷ್ಣ ಇವರ ಜ್ಞಾಪಕಾರ್ಥವಾಗಿ ಅವರ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟ್ ಮಾರಾಟಕ್ಕೆ**
1) J. H. ಪಟೇಲ್ 40x60, 30x55 ಪೂರ್ವ.
2) Dollars Colony 40x59 ಉತ್ತರ.
3) K.H.B. 40x60 ಪೂರ್ವ 30x40 ಉತ್ತರ.
KB : 98440-63409, 97315-63409

ಪ್ರೀತಿಯೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
ಎ. ಮರುಳಸಿದ್ದಪ್ಪ
ಎಂಜಿನಿಯರ್, ದಾವಣಗೆರೆ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಮನೆಗಳು ಮಾರಾಟಕ್ಕಿವೆ**
1) ಕುವೆಂಪು ಬಡಾವಣೆಯಲ್ಲಿ 40x60 North ಮೂರು ಬೆಡ್ ರೂಂ ಮನೆ, ಮೂರು ಬೆಡ್ ರೂಮಿಗೂ ಅಟ್ಯಾಚ್ಡ್ ಬಾತ್ ರೂಂ ಇದೆ.
2) S.S. B Blockನಲ್ಲಿ 30x40 South ಮೂರು ಬೆಡ್ ರೂಂ ಡ್ಯೂಪ್ಲೆಕ್ಸ್ ಮನೆ. ಹೊಸಮನೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
BA. B.Ed./B.Sc. B.Ed., B.A., B.Sc., B.Com ಆಗಿರುವ ಶಿಕ್ಷಕ/ಕಿಯರು ಬೇಕಾಗಿದ್ದಾರೆ. ಅಭ್ಯರ್ಥಿಗಳು ದಿ. 10.7.2021ರ ಒಳಗಾಗಿ ಕಚೇರಿಯಲ್ಲಿ ಸಂದರ್ಶಿಸಬಹುದು.
ಶ್ರೀಮಾತಾ ವಿದ್ಯಾಸಂಸ್ಥೆ (ರಿ.)
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ,
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಓ ಆಫೀಸ್ ಹಿಂಭಾಗ, ದಾವಣಗೆರೆ-6.
ಮೊ. : 99640 17729

**MEDICAL REPRESENTATIVE**
Required Medical Representative for a Reputed Pharma Company
Xenono Health Care Pvt. Ltd.
Male/Female
Experienced/Fresher
Mr. Prakash Mob: 97407 52587
Mr. Halesh Mob: 99867 53343

ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟುಗಳು ಮಾರಾಟಕ್ಕಿವೆ.
1) 30x40 East 35 ಲಕ್ಷಕ್ಕೆ, 30x40 North 44 ಲಕ್ಷಕ್ಕೆ, 30x40 South ಸೈಟು, 30x40 North ಸೈಟು, 30x50 West 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ವೆಯ್ಟರ್ಸ್, ಕ್ಯಾಪ್ಟನ್
ಅನುಭವವುಳ್ಳವರಿಗೆ ಆದ್ಯತೆ.
ಸಂಪರ್ಕಿಸಿ :
ಮೊ. 63628 20412
70191 37858

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಡಾಲರ್ಸ್ ಕಾಲೋನಿಯಲ್ಲಿ 30/57+56=1695 ಅಳತೆಯ ನಿವೇಶನ ಮಾರಾಟಕ್ಕೆ ಇದೆ (ದಕ್ಷಿಣ ಮುಖ ಸೈಟ್) 100% ಸರಿಯಾದ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳು ಇವೆ.
ಸಂಪರ್ಕಿಸುವ ದೂರವಾಣಿ ನಂ. :
9900637763

**ಮನೆ ಮಾರಾಟಕ್ಕಿದೆ**
RTO ಆಫೀಸ್, ರಿಂಗ್ ರೋಡ್ ಹತ್ತಿರ, ವಿಜಯನಗರ ಬಡಾವಣೆ 20x30 ಅಳತೆಯ 3 ಮಹಡಿ ಹಾಗೂ ಒಂದೂ ರೂಂ ಇರುವ ಮನೆ ಮಾರಾಟಕ್ಕಿದೆ.
91136 00953, 96204 36260

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 8 ರಿಂದ ಸಂಜೆ 6ರ ವರೆಗೆ. ಮನೆ ವಿಳಾಸ ಹೈಟೆಕ್ ಹಾಸ್ಪಿಟಲ್ ಹತ್ತಿರ. ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರಿಗೆ ಸಂಪರ್ಕಿಸಿ
83102 57998

**ಮಾರುತಿ ಕಾರ್ & ಬೈಕ್ ವಾಷ್ ಕೆಲಸಕ್ಕೆ ಬೇಕಾಗಿದ್ದಾರೆ**
ವಿದ್ಯಾನಗರ ಸರ್ವೀಸ್ ರಸ್ತೆ ಚಿಂದು, ಗಾರ್ಡನ್ ಹತ್ತಿರ, ದಾವಣಗೆರೆ.
ಸಂಬಳ 5000 ರಿಂದ 8000 ರೂ.
ಸಮಯ : 9.00 ರಿಂದ 6.30
80882 00156

**ಸೈಟ್ ಮಾರಾಟಕ್ಕಿದೆ**
KHB ಕಾಲೋನಿ, ಮ್ಯಾಜಿಸ್ಟ್ರೇಟ್ (Magistrate) ಬಂಗಲೆ ಇರುವ ರಸ್ತೆಯಲ್ಲಿ ಪೂರ್ವ (east) ದಿಕ್ಕಿನ 80x50 ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ.
99011 88665, 86182 90904

**ಬೇಕರಿಗೆ ಬೇಕಾಗಿದ್ದಾರೆ**
ಬೇಕರಿಯಲ್ಲಿ ಕೆಲಸ ಮಾಡಲು ಹುಡುಗ - ಹುಡುಗಿಯರು ಬೇಕಾಗಿದ್ದಾರೆ.
ತಕ್ಷಣವೇ ಸಂಪರ್ಕಿಸಿ :
ಮೊ. 99020-28159

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು PUC, B.Com ಆದಂತಹ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ : 20 ರಿಂದ 25 (ಅವಿವಾಹಿತರು). ದಾವಣಗೆರೆ ನಗರದದಲ್ಲಿ ವಾಸಿಸುವವರು ಮಾತ್ರ. ಸ್ವ-ವಿವರಗಳೊಂದಿಗೆ ಬೆಳಿಗ್ಗೆ 11 ರಿಂದ ಸಂಜೆ 7 ರವರೆಗೆ ಸಂಪರ್ಕಿಸಿರಿ
ಗುಪ್ತ ಗೋಲ್ಡ್ ಪ್ಯಾಲೇಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ಮೊ. 80957 43423

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**"ಸೂರ್ಯ" ನವೋದಯ**
ಆನ್‌ಲೈನ್‌ನಲ್ಲಿ 4ನೇ ಮತ್ತು 5ನೇ ತರಗತಿ ಮಕ್ಕಳಿಗೆ ನವೋದಯ ತರಬೇತಿಯು ದಿನಾಂಕ 11.07.2021ರಿಂದ ಪ್ರಾರಂಭ.
ಶ್ರೀ ಸುರೇಶ್ ಪಿ ಮುರಗಿ M.Sc. B.Ed
ಭಗೀರಥ ಸರ್ಕಲ್ ಹತ್ತಿರ, ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
99028 24909, 98447 48763

**REQUIRED**
Tally ERP 9 Accountant Required for PVC Pipe and Fittings of 3 Years Experience and Marketing Executive Required for PVC Pipe and Fitting.
Mob. : 97384 86520

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್‌ಮನ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 87622 21697

**ಮಹಿಳೆ ಬೇಕಾಗಿದ್ದಾರೆ**
ಪ್ರತಿದಿನ ಸಂಜೆ 5.30ರಿಂದ ಬೆಳಿಗ್ಗೆ 9ರವರೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ:
63639-54459

**ನೇರ ಪರೀಕ್ಷೆಗಳು**
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**Wanted/ಬೇಕಾಗಿದ್ದಾರೆ**
Male/Female Graduate for Billing and Accounts Assistant.
Tally Knowledge Compulsory.
Bagrecha Trading Company
162, Narasaraja Road, Davangere-577001.
Send Resume by Whatsapp :
98440 78802
E-mail : kkb27041973@gmail.com

**ಮನೆ ಬಾಡಿಗೆಗೆ/ಲೀಸ್‌ಗಿದೆ**
3 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 1ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ:
93410 12022

**ಮಳಿಗೆ ಬಾಡಿಗೆಗೆ ಇದೆ**
#117/10/10 RMC ಲಿಂಕ್ ರಸ್ತೆ, ದೇವರಾಜ್ ಬೋರ್‌ವೆಲ್ ಹತ್ತಿರ ದಾವಣಗೆರೆ 20x60 ಜಾಗದಲ್ಲಿ ಸುಸಜ್ಜಿತವಾಗಿ ಕಟ್ಟಿರುವ ಮಳಿಗೆ ಅಥವಾ, ಆಫೀಸ್ ಹಾಗೂ ಯಾವುದೇ ಸಗಟು ವ್ಯಾಪಾರಕ್ಕೆ ಸೂಕ್ತವಾದ ಮಳಿಗೆ ಬಾಡಿಗೆಗೆ ಲಭ್ಯವಿದೆ.
98459 84706, 86604 50922

**ತಕ್ಷಣ ಬೇಕಾಗಿದ್ದಾರೆ**
Accountant-Tally-02, Store Keeper-01, Stewards-05 Room Boys-05, House Keeping Supervisors-2
ಅನುಭವ ಇದ್ದವರಿಗೆ ಆದ್ಯತೆ ಕೊಡಲಾಗುವುದು ಮತ್ತು ಆಕರ್ಷಕ ಸಂಬಳ ಕೊಡುತ್ತೇವೆ. ಸಂಪರ್ಕಿಸಿ
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್, ದಾವಣಗೆರೆ.
9945988776, 7019137858

**WANTED TEACHERS**
B.A. B.Sc. B.Com, D.Ed. - 4, Aaya - 1
Contact immediately
Mob. : 99801 48289
98807 43838

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**15 ದಿನಗಳಲ್ಲಿ ಪರಿಹಾರ**
ಬಿ.ಪಿ., ಶುಗರ್, ಗ್ಯಾಸ್ಟ್ರಿಕ್, ಮಂಡಿನೋವು, ಮೈಗ್ರೇನ್, ಸ್ಟ್ರೋಕ್, ನರಗಳ ಸೆಳೆತ, ತೂಕದಲ್ಲಿ ಇಳಿಕೆ/ಏರಿಕೆ, ಪಾದದಲ್ಲಿ ಉರಿ/ನೋವು, ಮಸಲ್ ಕ್ಯಾಂಪ್
ವಿಳಾಸ: ಗಂಗೋತ್ರಿ ವೆಲ್ ನೆಸ್ ಸೆಂಟರ್
ಲಾಯರ್ ರಸ್ತೆ, ಬಂಧನ್ ಬ್ಯಾಂಕ್ ಹತ್ತಿರ, ದಾವಣಗೆರೆ.
8660235013

**FOR RENT**
900 sqft Space and Rooms on rent Shamanur Road
90082 20077

**ಭಟ್ಟರು ಬೇಕಾಗಿದ್ದಾರೆ**
ರಘುವೀರ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ತಂದೂರಿ ರೋಟಿ ಮಾಡಲು ಭಟ್ಟರು ಹಾಗೂ ಸಪ್ಲೈಯರ್ ಬೇಕಾಗಿದ್ದಾರೆ. ಸಂಪರ್ಕಿಸಿ
86180 45757

**CHANGE OF NAME**
I Mohamed Habeeb Ur Rahaman s/o Mohammed Hussain 49 Years Resident @ 639, 1st cross Al Iqra School Road, My Name is Entered as my School record Habeeb Ur Rahaman and after my Name change as Mohamed Habeeb ur Rahaman both names are me only and I will Continue my name is Mohamed Habeeb Ur Rahaman.
Mohamed Habeeb Ur Rahaman

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ರಾತ್ರಿ ಪಾಳೆಯಕ್ಕೆ ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
63639-54459

**For Immediate Job Hiring**
MI Redmi (Xiami) authorised Service Centre Davangere
1) Need CCO (Customer Care Officers)
2) Office Assistant.
Any Qualification
99801 50048 /63612 09220
email : cv to info@sinaine.com

**ದಾವಣಗೆರೆ ಹತ್ತಿರ ಕೊಳ್ಳಲು ಜಮೀನು ಬೇಕಾಗಿರುತ್ತದೆ.**
ಮೊ. 74112 50447

**ಬೇಕಾಗಿದ್ದಾರೆ**
ಫುಡ್‌ಮಾರ್ಟ್ ಸೂಪರ್‌ಮಾರ್ಕೆಟ್, ದಾವಣಗೆರೆ ಇಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಯಾವುದೇ ಡಿಗ್ರಿ
ಮೊ. 98864 63531

**ಶಿಕ್ಷಕಿ/ಕರು ಬೇಕಾಗಿದ್ದಾರೆ**
ದಾವಣಗೆರೆ ನಗರದ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಬೋಧಿಸಲು ಅರ್ಹ ಅಭ್ಯರ್ಥಿಗಳು ಬೇಕಾಗಿದ್ದಾರೆ. CBZ- 01, PCM-02, BA, B.Ed (H/E) BA, B.Ed/MA- Eng-01 ಆಯ್ಕೆಯಾದ ಅಭ್ಯರ್ಥಿಗಳಿಗೆ ಆಕರ್ಷಕ ವೇತನ ನೀಡಲಾಗುವುದು.
ಸಂಪರ್ಕಿಸಿ
9844735946, 9663195531

**ಬೇಕಾಗಿದ್ದಾರೆ**
WANTED
Lecturers :
English, Biology, Physics, Chemistry,
Office Staff : Male or Female (02 Post) Contact :
77601 55550

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**VACANCY**
A post for Accountancy is vacant, if you are eligible please mail your resume to the below mentiond mail id. Experince Required : Minimum 2 Years Software Required : Tally & Excel, Mail id: acfdvg@gmail.com
Ph No. 08192-231168
Address: Aradhya Industries, Beside Nandi Petrol Bunk, P.B. Road, Davanagere.

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟಿ ರಿ.ಸ.ನಂ 7/16 ರಲ್ಲಿ 17 ಗುಂಟೆ ಜಮೀನು ಮಾರಾಟಕ್ಕಿದೆ. ಮೇನ್ ರೋಡ್ ಪಕ್ಕ ಶ್ಯಾಮನೂರಿನಿಂದ 3 ಕಿಲೋ ಮೀಟರ್, ಮಿಟ್ಲಕಟ್ಟೆ
98443 60459, 87220 14318
95352 69849

SSLC / PUC / Degree ಪಾಸ್/ಫೇಲ್ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್- 2ವರ್ಷ. ಕೇವಲ 6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಗಂಗೋತ್ರಿ ಕಮ್ಯುನಿಟಿ ಕಾಲೇಜ್ (ರಿ)
ಬಂಧನ್ ಬ್ಯಾಂಕ್ ಹತ್ತಿರ, ಲಾಯರ್ ರೋಡ್, ದಾವಣಗೆರೆ
86602 35013

**FOR RENT**
Independent House with 3BHK, Near Purantar Hospital, 3rd Cross, MCC 'A' Block, Davangere
Ph. : 9945423613 / 8088344383

**ಪ್ರವೇಶ ಪ್ರಕಟಣೆ 2020-21**
SSLC/ PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/ PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. –ಜಾಹೀರಾತು ವ್ಯವಸ್ಥಾಪಕರು

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

**REQUIRED**
Require marketing executive
Kalpataru Plywoods
# 6, 1st main road,
S. Nijalingappa Layout Near Laxmi flour mills Davangere.
94483 41142, 94498 11142

**ಹೆಸರು ಸ್ಪಷ್ಟೀಕರಣ**
ದಾವಣಗೆರೆ ಎಸ್‌ಪಿಎಸ್ ನಗರ ಡೋ.ನಂ. 948, ಕೊಂಡಜ್ಜಿ ರಸ್ತೆ 2ನೇ ಹಂತದ ವಾಸಿಯಾದ ಸಂತೋಷ್‌ಕುಮಾರ್ ಎಸ್.ಸಿ. ಆದ ನನ್ನ ಚಾಲನಾ ಪರವಾನಗಿಯಲ್ಲಿ ನನ್ನ ತಂದೆಯ ಹೆಸರು ಕೈತಪ್ಪಿನಿಂದಾಗಿ ವೀರೇಶ್ ಬದಲಾಗಿ ಶಿವಾನಂದಸ್ವಾಮಿ ಹೆಚ್. ವಿ. ಎಂದು ನಮೂದಾಗಿರುತ್ತದೆ. ಆದರೆ ನನ್ನ ಉಳಿದ ಎಲ್ಲಾ ದಾಖಲೆಗಳಲ್ಲಿ ವೀರೇಶ್ ಎಂದಿದೆ. ಆದ್ದರಿಂದ ದಿನಾಂಕ 7.7.2021ರಂದು ದಾವಣಗೆರೆ ನೋಟರಿಯವರ ಮುಂದೆ ನಮ್ಮ ತಂದೆಯ ಹೆಸರು ವೀರೇಶ್ ಎಂದು ಪ್ರಮಾಣೀಕರಿಸಿದ್ದೇನೆ.
- ಸಂತೋಷ್‌ಕುಮಾರ್ ಎಸ್.ಸಿ.

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ 1 ವರ್ಷದ ಮಗುವನ್ನು ಮನೆಯಲ್ಲಿ ನೋಡಿಕೊಳ್ಳಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು. ಊಟ ಮತ್ತು ವಸತಿ ನೀಡಲಾಗುವುದು.
ಮೊ. : 6362782630

**ಸೈಟು ಮಾರಾಟಕ್ಕಿದೆ**
ನಗರದ ಎಂ.ಸಿ.ಸಿ.'ಬಿ' ಬ್ಲಾಕ್ ನ ಬಾಪೂಜಿ ಹೈಸ್ಕೂಲ್ ಪಕ್ಕದಲ್ಲಿ ಹಾದುಹೋಗುವ 21ನೇ ಮುಖ್ಯ ರಸ್ತೆಗೆ 40x60 ಅಡಿ ಅಳತೆಯ ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕಿದೆ. ಆಸಕ್ತರು ನೇರವಾಗಿ ಸಂಪರ್ಕಿಸಿ :
MOHAN REAL ESTATE AGENCIES
9742434049

**FOR RENT**
Independent House with 3 BHK near Purantar Hospital, 3rd Cross, MCC 'A' Block, Davangere.
99454 23613, 80883 44383

**ಶ್ರೀ ದಿವ್ಯ ಹೀಲಿಂಗ್ಸ್**
ಉದ್ಯೋಗ, ವ್ಯವಹಾರ, ಹಣಕಾಸಿನ ಸಮಸ್ಯೆ, ವಾಸಿಸುವ ಮತ್ತು ಕಟ್ಟುತ್ತಿರುವ ಮನೆ ವಾಸ್ತು, ವಧು-ವರರ ಹೊಂದಾಣಿಕೆ ತಿಳಿಯಲು, ಇಂದೇ ಸಂಪರ್ಕಿಸಿ :
99726 00713

## ಆಲೂರು ಹಟ್ಟಿಯಲ್ಲಿ ಲಸಿಕಾ ಜಾಗೃತಿ



ದಾವಣಗೆರೆ, ಜು.8- ಮಾಯಕೊಂಡ ಕ್ಷೇತ್ರ ಆಲೂರು ಹಟ್ಟಿಯಲ್ಲಿ ಕೊರೊನಾ ಲಸಿಕೆ ಹಾಕಿಸಿಕೊಳ್ಳುವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಯಿತು. ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪರಿಶಿಷ್ಟ ಜಾತಿ ರಾಜ್ಯ ಉಪಾಧ್ಯಕ್ಷ ನಾಗರಾಜ್ ನಾಯ್ಕ್ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಉಪಾಧ್ಯಕ್ಷ ಡಾ. ತುಳಸಿನಾಯ್ಕ್ ಜನರಿಗೆ ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯತ್ ಸದಸ್ಯ ಬಸವಂತಪ್ಪ, ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಬಿ.ಟಿ. ಹನುಮಂತಪ್ಪ, ಕಾಂಗ್ರೆಸ್ ಮುಖಂಡರಾದ ರಾಜನಾಯ್ಕ್, ಅಣಜಿ ರಾಜಣ್ಣ, ಎಪಿಎಂಸಿ ಅಧ್ಯಕ್ಷ ಚಂದ್ರಪ್ಪ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರಂಗನಾಯ್ಕ, ಗ್ರಾ.ಪಂ. ಮಾಜಿ ಸದಸ್ಯ ಪುಟ್ಟಾನಾಯ್ಕ, ಗ್ರಾ.ಪಂ. ಮಾಜಿ ಸದಸ್ಯ ಮಹಾಂತೇಶ್ ನಾಯ್ಕ, ಮೂರ್ತ್ಯಪ್ಪ, ಅಂಜಿನಪ್ಪ ಹಾಗು ಇನ್ನಿತರೆ ಮುಖಂಡರು ಉಪಸ್ಥಿತರಿದ್ದರು.

# ಆರೋಗ್ಯ ಕೇಂದ್ರಗಳಿಗೆ ಆಕ್ಸಿಜನ್ ಕಾನ್ಸಂಟ್ರೇಟರ್ ಕೊಡುಗೆ

ದಾವಣಗೆರೆ, ಜು.8- ಇಲ್ಲಿನ ಚಿಗಟೇರಿ ಜಿಲ್ಲಾಸ್ಪತ್ರೆ ಸೇರಿದಂತೆ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿರುವ ಆರೋಗ್ಯ ಕೇಂದ್ರಗಳಿಗೆ ಭಾಗರಿ ಫೌಂಡೇಷನ್, ಅತ್ಯಾತಿ ಟೆಕ್ನಾಲಜಿ ಪ್ರೈ ಲಿಮಿಟೆಡ್, ರೂಟ್ಸ್ ರಿಫಾರ್ಮ್ಸ್ ಇನಿಶಿಯೇಟಿವ್ ಪ್ರೈ ಲಿಮಿಟೆಡ್ ಇವುಗಳು ಜಂಟಿಯಾಗಿ 48 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಕೊಡುಗೆಯಾಗಿ ನೀಡುವ ಮುಖೇನ ಸಮಾಜಮುಖಿ ಕಾಳಜಿ ಮೆರೆಯಲಾಯಿತು.

ಸಿ.ಜಿ. ಆಸ್ಪತ್ರೆಯ ಆವರಣದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸಮ್ಮುಖದಲ್ಲಿ ಸಂಸ್ಥೆಗಳ ಮುಖ್ಯಸ್ಥರು ಕಾನ್ಸಂಟ್ರೇಟರ್‌ಗಳನ್ನು ಇಂದು ಹಸ್ತಾಂತರ ಮಾಡಲಾಯಿತು.

ಈ ವೇಳೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕೊರೊನಾ ಸಂಕಷ್ಟದ ಸಮಯದಲ್ಲಿ ಸೋಂಕಿತರಿಗೆ ಆಮ್ಲಜನಕದ ಅವಶ್ಯಕತೆ ತುರ್ತಾಗಿರಲಿದ್ದು, ಅವಶ್ಯಕತೆಯಿರುವ ರೋಗಿಗಳಿಗೆ ಆಕ್ಸಿಜನ್ ಸಂಗ್ರಹಿಸಿ ನೀಡಲು ಕಾನ್ಸಂಟ್ರೇಟರ್‌ಗಳು ಉಪಯುಕ್ತವಾಗಲಿವೆ ಎಂದು ಸಂಸ್ಥೆಯ ಸೇವಾ ಕಾರ್ಯವನ್ನು ಶ್ಲಾಘಿಸಿದರು.



ಇಂತಹ ಅವಶ್ಯಕ ವೈದ್ಯಕೀಯ ಪರಿಕರಗಳನ್ನು ಈ ಸಂಸ್ಥೆಗಳು ಸರ್ಕಾರಿ ಆಸ್ಪತ್ರೆಗಳಿಗೆ ಕೊಡುವ ಮೂಲಕ ಅವುಗಳ ಸಾಮಾಜಿಕ ಜವಾಬ್ದಾರಿಯನ್ನು ಎತ್ತಿ ತೋರಿಸಿದೆ. ಇನ್ನೂ ಸಂಘ, ಸಂಸ್ಥೆಗಳು ಹೀಗೆ ಜನಾವಶ್ಯಕ ಪರಿಕರಗಳನ್ನು ನೀಡಿದಲ್ಲಿ ಮೂರನೆ ಅಲೆಯನ್ನು ಮತ್ತಷ್ಟು ಪ್ರಬಲವಾಗಿ ಎದುರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ರೂಟ್ಸ್ ರಿಫಾರ್ಮ್ಸ್ ಇನಿಶಿಯೇಟಿವ್ ಸಂಸ್ಥಾಪಕರಾದ ಅರುಣಾ ಸಂಪಿಗೆ ಕಂದಗಲ್ಲು ಮಾತನಾಡಿ, ಗ್ರಾಮೀಣ ಭಾಗದ ಮಹಿಳೆಯರನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಸಬಲೀಕರಣಗೊಳಿಸುವುದು, ಮಹಿಳೆಯರಲ್ಲಿ ಆರ್ಥಿಕ ಸಾಕ್ಷರತೆಯ ಅರಿವು ಮೂಡಿಸುವ ಕಾರ್ಯ ಸೇರಿದಂತೆ, ನಮ್ಮ ಸಂಸ್ಥೆಯಿಂದ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದೇವೆ. ಸಂಸ್ಥೆಯ ಅಭಿಲಾಷೆಯಂತೆ ಸಿ.ಜಿ. ಜಿಲ್ಲಾಸ್ಪತ್ರೆಗೆ ಎಂಟು, ಉಳಿದ ಐದು ತಾಲ್ಲೂಕುಗಳಲ್ಲಿನ ಆರೋಗ್ಯ ಕೇಂದ್ರಗಳಿಗೂ ತಲಾ 8 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಸಂಸ್ಥೆಯ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಡಿಹೆಚ್‌ಒ ಡಾ. ಎಲ್. ನಾಗರಾಜ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ರೂಟ್ಸ್ ರಿಫಾರ್ಮ್ಸ್ ಇನಿಶಿಯೇಟಿವ್‌ನ ವಿಭಾಗೀಯ ವ್ಯವಸ್ಥಾಪಕ ಸುರೇಶ್ ನರ್ತಿ, ಕಂದಗಲ್ಲು ಗ್ರಾಮ ಪಂಚಾಯ್ತಿ ಸದಸ್ಯ ರಾಜೇಶ್ ಗೌಡ್ರು ಸೇರಿದಂತೆ, ಇತರರು ಇದ್ದರು.

## ಅಕ್ಕಮಹಾದೇವಿ ಸಮಾಜದಿಂದ ಆಹಾರ ಕಿಟ್ ವಿತರಣೆ



ದಾವಣಗೆರೆ, ಜು.8- ನಗರದ ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ ಬಡಜನತೆಗೆ ಆಹಾರದ ಕಿಟ್ ವಿತರಿಸಲಾಯಿತು. ಕಿಟ್‌ಗಳನ್ನು ಅಧ್ಯಕ್ಷರಾದ ಕೆ.ಕೆ. ಸುಶೀಲಮ್ಮ, ಕಾರ್ಯದರ್ಶಿ ದೊಗ್ಗಳ್ಳಿ ಸುವರ್ಣಮ್ಮ, ಉಪಾಧ್ಯಕ್ಷರಾದ ನೀಲಗುಂದ ಜಯಮ್ಮ, ಉಮಾ ವೀರಭದ್ರಪ್ಪ ಹಾಗೂ ಪದಾಧಿಕಾರಿಗಳು ವಿತರಿಸಿದರು. ಈ ಸಂದರ್ಭದಲ್ಲಿ ಸಮಾಜದ ಶಾಂತಾ ಯಾವಗಲ್, ರತ್ನಮ್ಮ ಮಾಗಾನಳ್ಳಿ, ಸರೋಜಮ್ಮ ಮುಂಡಾಸ ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯೆಯರು ಉಪಸ್ಥಿತರಿದ್ದರು.

## ಯೋಧರನ್ನು ಗೌರವಿಸಿದ ರೋಟರಿ



ದಾವಣಗೆರೆ, ಜು.8- ರೋಟರಿ ಕ್ಲಬ್ ದಾವಣಗೆರೆ ಎರಡು ನೂರು ಜನರಿಗೆ ಕೊರೊನಾ ಲಸಿಕೆ ನೀಡಲಾಯಿತು. ಈ ಸಂದರ್ಭದಲ್ಲಿ ಕೊರೊನಾ ಯೋಧರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್, ಡಾ. ನಟರಾಜ್, ಡಾ. ನಾಗರಾಜ್, ಡಾ. ಮೀನಾಕ್ಷಿ ಅವರಿಗೆ ಅವರ ವೈದ್ಯಕೀಯ ಗುರುಗಳಾದ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಛೇರ್ಮನ್ ಡಾ. ಎ.ಎಂ. ಶಿವಕುಮಾರ್ ಅವರಿಂದ ಸನ್ಮಾನಿಸಲಾಯಿತು.

ಡಾ. ಎ.ಎಂ. ಶಿವಕುಮಾರ್ ಅವರಿಗೆ ಅವರ ವೈದ್ಯಕೀಯ ಶಿಷ್ಯರಿಂದ ಗೌರವ ಸಮರ್ಪಿಸಿದ್ದು ವಿಶೇಷವಾಗಿತ್ತು. ನಂತರ ಸಿ.ಜಿ. ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಗಳಾದ ಸಿಸ್ಟರ್ ಬಿ. ಸವಿತಾ, ಸುಮಿತಾ ಎನ್. ಹೆಗ್ಡೆ, ಎಸ್. ಹುಲಿಗೆಮ್ಮ ಅವರನ್ನು ಇನ್ನರ್ ವ್ಹೀಲ್ ಸದಸ್ಯೆಯರಾದ ಸುನಿತಾ ಮೃತ್ಯುಂಜಯ, ಅನಿತಾ ಆನಂದ್, ಚೂಡಾಮಣಿ, ವಿಜಯಾ ನಟರಾಜ್, ನಿರ್ಮಲ ಉಮಾಶಂಕರ್ ಮತ್ತಿತರರು ಸನ್ಮಾನಿಸಿದರು.

ರೋಟರಿ ಕ್ಲಬ್ ದಾವಣಗೆರೆ ಅಧ್ಯಕ್ಷ ಆರ್.ಟಿ. ಮೃತ್ಯುಂಜಯ, ಕಾರ್ಯದರ್ಶಿ ಬೇತೂರ್ ಜಗದೀಶ್, ಸಂಚಾಲಕ ಅಂದನೂರು ಆನಂದ್, ಆರ್.ಟಿ. ನಟರಾಜ್, ಹಿರಿಯ ಸದಸ್ಯರಾದ ಎಸ್.ಕೆ. ವೀರಣ್ಣ, ಆರ್.ಎಸ್. ವಿಜಯಾನಂದ್, ಜಿಲ್ಲಾ ಫಾರ್ಮಸಿ ಅಧಿಕಾರಿ ಕೊಟ್ರೇಶ್ ಬಣಕಾರ್ ಮೊದಲಾದವರು ಲಸಿಕಾ ಶಿಬಿರದ ನೇತೃತ್ವ ವಹಿಸಿದ್ದರು. ರೋಟರ್ಯಾಕ್ಟ್ ಸದಸ್ಯರಾದ ಸಂದೇಶ್ ಆರ್.ಎಂ., ಸೊಕ್ಕೆ ವಿನಯ್, ತೇಜಸ್ ಆರ್.ಯು, ತನುಶ್ರೀ ಆರ್.ಯು, ಶ್ರೇಯಸ್ ಜಿ.ಪಿ, ಶಿವದೀಪ್ ಎನ್.ಎಸ್. ಮತ್ತಿತರರು ಶಿಬಿರವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

## ಶಾಮನೂರು ಕುಟುಂಬದಿಂದ ಸಿದ್ದವೀರಪ್ಪ ಬಡಾವಣೆಯಲ್ಲಿ ಲಸಿಕಾ ಶಿಬಿರ



ದಾವಣಗೆರೆ, ಜು.8- ಹಿರಿಯ ಶಾಸಕ ಡಾ॥ ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ನಾಗರಿಕರಿಗಾಗಿ ಹಮ್ಮಿಕೊಂಡಿರುವ ಉಚಿತ ಲಸಿಕಾ ಶಿಬಿರ ಕಾರ್ಯಕ್ರಮ ಇಂದೂ ಸಹ ಮುಂದುವರೆದಿದ್ದು, ನಾಗರಿಕರು ಉಚಿತ ಲಸಿಕೆಯನ್ನು ಪಡೆದರು.

ನಗರ ಪಾಲಿಕೆ 42ನೇ ವಾರ್ಡಿನ ಸಿದ್ದವೀರಪ್ಪ ಬಡಾವಣೆಯ ಹಳ್ಳಿ ಮಹಾದೇವಪ್ಪ ಶಾಲೆಯಲ್ಲಿ ನಿನ್ನೆ ನಾಗರಿಕರಿಗೆ ಲಸಿಕೆ ನೀಡಲಾಯಿತು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಾಮನೂರು ಜಿ.ಹೆಚ್. ರಾಮಚಂದ್ರಪ್ಪ ಅವರು ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಸಿಬ್ಬಂದಿ ವರ್ಗದವರು ಲಸಿಕಾ ಶಿಬಿರ ನಡೆಸಿಕೊಟ್ಟರು.

ಮಾಜಿ ನಗರಸಭಾ ಸದಸ್ಯರಾದ ಶ್ರೀಮತಿ ವಿಜಯಾ ಜಿ.ಬಿ.ಲಿಂಗರಾಜ್, ಶಾಮನೂರು ಟಿ.ಬಸವರಾಜ್, ಮಾಜಿ ನಗರ ಪಾಲಿಕೆ ಸದಸ್ಯ ಜಿ.ಬಿ.ಲಿಂಗರಾಜ್, ಮುಖಂಡರುಗಳಾದ ಕರಿಯಪ್ಪ, ಮಳಲ್ಕೆರೆ ಕೆ.ಎಸ್. ಮಂಜುನಾಥ್, ರವಿ ಧಣಿ, ಬೇತೂರು ನರೇಂದ್ರ, ರಾಜು, ಜಿ.ಎಲ್.ಸುಹಾಸ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಡಾ. ಕರಿಬಸಯ್ಯ ಮಠದ್‌ಗೆ ಪಿಹೆಚ್‌ಡಿ



ದಾವಣಗೆರೆ, ಜು.8- ಹಾಲುಮತದ ಕುಲ ಗುರುಗಳೂ, ಮನೋಚಿಕಿತ್ಸಾ ತಜ್ಞರೂ ಆದ ಡಾ. ಕರಿಬಸಯ್ಯ ಮಠದ ವೀ ಗಂಗನರಸಿ ಅವರಿಗೆ ರಾಜಸ್ಥಾನದ ಸಿ.ಪಿ. ವಿಶ್ವವಿದ್ಯಾಲಯ ಪಿಹೆಚ್ ಡಿ ಪದವಿ ನೀಡಿ ಗೌರವಿಸಿದೆ.

'ಅಸೆಸ್‌ಮೆಂಟ್ ಆಫ್ ಮೆಡಿಕೇಶನ್ ಅಡೇರೆನ್ಸ್ ಪ್ಯಾಟ್ರನ್ ಫಾರ್ ಪೇಶಂಟ್ ವಿತ್ ಕ್ರೋನಿಕ್ ಡಿಸೀಜಸ್ ಇನ್ ಸೌತ್ ಇಂಡಿಯನ್ ಹಾಸ್ಪಿಟಲ್ಸ್' ಎಂಬ ಮಹಾಪ್ರಬಂಧ ಮಂಡಿಸಿದ್ದರು.

ಡಾ. ಸತ್ಯನಾಥನ್, ಡಾ. ಟಿ.ಎಸ್. ಸತ್ಯನಾರಾಯಣರಾವ್ ಇವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಲಾಗಿತ್ತು.

# 721 ಕೋ. ಬೆಂಬಲ ಬೆಲೆ ಬಾಕಿ ಶೀಘ್ರ ಪಾವತಿ

**(1ನೇ ಪುಟದಿಂದ)** ಸಭೆಯಲ್ಲಿ ಚರ್ಚಿಸಲಾಯಿತು. ದಿನಾಂಕ ಜುಲೈ 29ರಂದು ಸಚಿವ ಸಂಪುಟ ಉಪ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಯಾವ ರೀತಿಯಾಗಿ ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕು ಎಂಬ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ರೈತರಿಗೆ ಬೆಂಬಲ ಬೆಲೆ ನೀಡುವ ಸಂಬಂಧ ಇಂದು ಪ್ರಥಮ ಸಭೆಯನ್ನು ನಡೆಸಲಾಯಿತು. ಕೃಷಿ ಸಚಿವ ಬಿ.ಸಿ.ಪಾಟೀಲ್, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಉಮೇಶ್ ಕತ್ತಿ, ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ, ಪೌರಾಡಳಿತ ಮತ್ತು ಸಕ್ಕರೆ ಸಚಿವ ಶಂಕರ್, ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ್ ಸಭೆಯಲ್ಲಿ ಉಪಸ್ಥಿತರಿದ್ದರು.

ಕೊರೊನಾ ಸೋಂಕಿನಿಂದ ಮೃತಪಟ್ಟ ರೈತರ ಸಾಲ ಮನ್ನಾ ಮಾಡಲು ಸರ್ಕಾರ ತೀರ್ಮಾನಿಸಿದ್ದು, ಎರಡು-ಮೂರು ದಿನಗಳಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಸಚಿವರು ಹೇಳಿದರು.

ಕೋವಿಡ್ ನಿಂದ ಮೃತಪಟ್ಟ ರೈತರ ಮಾಹಿತಿ ನೀಡಲು ಎಲ್ಲಾ ಸಹಕಾರ ಸಂಸ್ಥೆಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಎಲ್ಲಾ ಡಿಸಿಸಿ ಹಾಗೂ ಅಪೆಕ್ಸ್ ಬ್ಯಾಂಕ್ ಗಳಿಗೆ ಮಾಹಿತಿ ನೀಡಲಾಗಿದೆ. ಎಷ್ಟು ಜನ ಸಾಲ ತೆಗೆದುಕೊಂಡಿದ್ದರು. ಅದರಲ್ಲಿ ಎಷ್ಟು ಜನ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂಬ ಮಾಹಿತಿಯನ್ನು ಪಡೆದುಕೊಳ್ಳಲಾಗುವುದು. ನಂತರ ಅದರ ಆಧಾರದ ಮೇಲೆ ಬ್ಯಾಂಕುಗಳಲ್ಲಿ ಎಷ್ಟು ಲಾಭ ಬರುತ್ತಿದೆ ಎಂಬುದನ್ನು ಮಾಹಿತಿ ತೆಗೆದುಕೊಂಡು ಎಷ್ಟು ಸಾಲ ಮನ್ನಾ ಮಾಡಬೇಕೆಂಬುದನ್ನು ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ 21 ಡಿಸಿಸಿ ಬ್ಯಾಂಕ್‌ಗಳಿದ್ದು, ಅದರಲ್ಲಿ 15 ರಿಂದ 16 ಡಿಸಿಸಿ ಬ್ಯಾಂಕ್ ಗಳು ಲಾಭದಲ್ಲಿವೆ. ಆಯಾ ಜಿಲ್ಲೆಯಲ್ಲಿ ಸಾಲ ಕೊಡಲು ಸಮರ್ಥವಾಗಿವೆ. ಕೆಲವು ಬ್ಯಾಂಕುಗಳಿಗೆ ಅಷ್ಟೊಂದು ಲಾಭ ಇಲ್ಲ. ಸಬಲವಾಗಿರದ ಡಿಸಿಸಿ ಬ್ಯಾಂಕ್ ಗಳಿಗೆ ಅಪೆಕ್ಸ್ ಬ್ಯಾಂಕ್ ಗಳಿಂದ ಆರ್ಥಿಕ ನೆರವು ಪಡೆಯಲಾಗುತ್ತದೆ. ಚರ್ಚೆ ಮಾಡಿ ರೈತರ ಸಾಲಮನ್ನಾ ಕುರಿತು ಅಂತಿಮಗೊಳಿಸಲಾಗುವುದು ಎಂದರು.

# ತಿರುಚುವಿಕೆಯಿಂದ ಚುನಾವಣೆಗೆ ಅಪಾಯ

**(1ನೇ ಪುಟದಿಂದ)** ಗಡಿಯಾಚೆಗಿಂದ ಕಾರ್ಯ ನಿರ್ವಹಿಸುತ್ತವೆ ಮತ್ತು ಇವು ಬಹುರಾಷ್ಟ್ರೀಯ ಕಂಪನಿಗಳಾಗಿದ್ದು ಬೃಹತ್ ಆಸ್ತಿ ಮತ್ತು ಪ್ರಭಾವ ಹೊಂದಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಟಿಪ್ಪಣಿ ಮಾಡಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಹಾಗೂ ಹೃಶಿಕೇಶ್ ರಾವ್ ಅವರಿದ್ದಾರೆ.

ದೆಹಲಿ ಗಲಭೆಗಳಿಗೆ ಸಂಬಂಧಿಸಿದಂತೆ ಹಾಜರಾಗಲು ದೆಹಲಿ ವಿಧಾನಸಭೆಯ ಶಾಂತಿ ಮತ್ತು ಸೌಹಾರ್ದ ಸಮಿತಿ ಕಳಿಸಿದ್ದ ಸಮನ್ಸ್ ಪ್ರಶ್ನಿಸಿ ಫೇಸ್‌ಬುಕ್‌ನ ಭಾರತೀಯ ಉಪಾಧ್ಯಕ್ಷ ಅಜಿತ್ ಮೋಹನ್ ದಾಖಲಿಸಿದ್ದ ಅರ್ಜಿಯ ಕುರಿತು ತೀರ್ಪು ನೀಡುವಾಗ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಫೇಸ್‌ಬುಕ್ ಸಮಿತಿ ಎದುರು ಹಾಜರಾಗಬೇಕು. ಫೇಸ್‌ಬುಕ್ ಹೊಣೆಗಾರಿಕೆಯಿಂದ ಹೊರತಾಗಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ತಂತ್ರಜ್ಞಾನದ ಈ ಕಾಲದಲ್ಲಿ ಡಿಜಿಟಲ್ ವೇದಿಕೆಗಳು ರೈಲ್ವೆ ನಿಲ್ದಾಣದ ರೀತಿಯಲ್ಲ. ರೈಲುಗಳ ಆಗಮನ ಹಾಗೂ ನಿರ್ಗಮನ ನಿಯಂತ್ರಿಸಬಹುದು. ಆದರೆ, ಡಿಜಿಟಲ್ ವೇದಿಕೆಗಳನ್ನು ಕೆಲ ಕಾಲದಲ್ಲಿ ನಿಯಂತ್ರಿಸಲಾಗದು, ಇವುಗಳು ತಮ್ಮದೇ ಆದ ಸವಾಲು ಹೊಂದಿವೆ ಎಂದು ನ್ಯಾಯಾಲಯ ಹೇಳಿದೆ.

ಫೇಸ್‌ಬುಕ್ 2.85 ಶತಕೋಟಿ ಸಕ್ರಿಯ ಬಳಕೆದಾರರನ್ನು ಹೊಂದಿದೆ. ಇದು ಭೂಮಿಯ ಒಟ್ಟು ಜನಸಂಖ್ಯೆಯ ಮೂರನೇ ಒಂದರಷ್ಟಾಗಿದೆ. ಇಷ್ಟು ಶಕ್ತಿ ಹೊಣೆಗಾರಿಕೆಯೊಂದಿಗೆ ಬರುತ್ತದೆ. ಫೇಸ್‌ಬುಕ್ ರೀತಿಯ ಕಂಪನಿಗಳು ತಮಗೆ ವಹಿಸಲಾದ ಇಂತಹ ಅಧಿಕಾರದ ಬಗ್ಗೆ ಜವಾಬ್ದಾರಿ ಹೊಂದಿವೆ. ಫೇಸ್‌ಬುಕ್ ಧ್ವನಿ ರಹಿತರಿಗೆ ಧ್ವನಿ ಒದಗಿಸುವಲ್ಲಿ ಮಹತ್ವದ ಪಾತ್ರ ಹೊಂದಿವೆ ಎಂದೂ ನ್ಯಾಯಾಲಯ ಹೇಳಿದೆ.

ಸಾಮಾಜಿಕ ಮಾಧ್ಯಮ ನಾಗರಿಕರ ನಡುವೆ ಸಂವಾದಕ್ಕೆ ದಾರಿ ತೆರೆದಿವೆ. ಮತ್ತೊಂದೆಡೆ ಹಲವಾರು ಹಿತಾಸಕ್ತಿ ಗುಂಪುಗಳು ಅಡ್ಡಿಪಡಿಸುವ ಸಾಮರ್ಥ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಇದರಿಂದಾಗಿ ತೀವ್ರವಾದಿ ನಿಲುವುಗಳು ಮುಖ್ಯವಾಹಿನಿಗೆ ಬಂದಿದ್ದು, ಅದು ಅಪಪ್ರಚಾರಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ನ್ಯಾಯಾಲಯ ಹೇಳಿದೆ.

ಮ್ಯಾನ್ಮಾರ್‌ನಲ್ಲಿ ನರ ಸಂಹಾರ ನಡೆದಿದ್ದರ ಹಿಂದಿನ ಪ್ರಚೋದನೆ ತಡೆಯು ತನ್ನ ವೈಫಲ್ಯದ ಬಗ್ಗೆ ಫೇಸ್‌ಬುಕ್ ಪರಿಗಣಿಸಿದೆ. ಅಪಪ್ರಚಾರವನ್ನು ಫೇಸ್‌ಬುಕ್ ಉದ್ಯೋಗಿಗಳು ಗುರುತಿಸದೇ ಇದ್ದದ್ದು ಹಿಂಸಾಚಾರಕ್ಕೆ ನೆರವಾಯಿತು. ಅಲ್ಲದೇ ಶ್ರೀಲಂಕಾದಲ್ಲಿ ಫೇಸ್‌ಬುಕ್ ದುರ್ಬಳಕೆಯ ಬಗ್ಗೆ ಗಂಭೀರ ಪ್ರತಿಕ್ರಿಯೆ ನೀಡದೇ ಇದ್ದುದಕ್ಕೆ ಫೇಸ್‌ಬುಕ್ ಕ್ಷಮೆ ಯಾಚಿಸಿದೆ ಎಂದು ನ್ಯಾಯಾಲಯ ತಿಳಿಸಿದೆ.

# ಲೂಟಿ ಮಾಡುತ್ತಿರುವ ಬಿಜೆಪಿ ಸರ್ಕಾರ

**(1ನೇ ಪುಟದಿಂದ)** ಸರ್ಕಾರವಾಗಿದೆ. ಜನರಿಗೆ ಉದ್ದೇಶ ಪೂರ್ವಕವಾಗಿ ಮೋಸ ಮಾಡುವ ಮೂಲಕ ಜನ ಸಾಮಾನ್ಯರ ಬದುಕಿನ ಮೇಲೆ ಆಟವಾಡುತ್ತಿದೆ ಎಂದು ದೂರಿದರು.

ಬಡವರಿಗೆ ಈವರೆಗೂ ಒಂದೂ ನಿವೇಶನ ನೀಡಿಲ್ಲ. ಮಾನವೀಯತೆ ಇಲ್ಲದ, ಕಣ್ಣಿಲ್ಲದ ಬಿಜೆಪಿ ಸರ್ಕಾರಕ್ಕೆ ಲಸಿಕೆ ಸೇರಿದಂತೆ, ಉತ್ತಮ ಕೆಲಸ ಮಾಡುವುದಕ್ಕೆ ಕೋರ್ಟ್ ಆದೇಶ ನೀಡಬೇಕಿದೆ. ಸದ್ಯಕ್ಕೆ ಕೋವಿಡ್‌ಗಿಂತ ಬಿಜೆಪಿ ಸರ್ಕಾರಕ್ಕೇ ಹೆಚ್ಚು ಚಿಕಿತ್ಸೆ ನೀಡಬೇಕು. ಸಚಿವರ ಮಧ್ಯೆ ಹೊಂದಾಣಿಕೆ ಇಲ್ಲ. ಜನರ ಸಮಸ್ಯೆ ಬಗೆಹರಿಸುವ ಬದಲು ಇವರ ಸಮಸ್ಯೆ ಬಗೆಹರಿಸಲು ಆಗುತ್ತಿಲ್ಲ. ಮುಂದಿನ ದಿನಗಳಲ್ಲಿ ಬಿಜೆಪಿಯ ಭ್ರಷ್ಟಾಚಾರದ ಬಗ್ಗೆ ಜನರಿಗೆ ಬೂತ್ ಮಟ್ಟದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತಿಳಿಸುವ ಕೆಲಸ ಮಾಡಬೇಕು ಎಂದರು.

ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿಸಿದೆ. ಬಹುಪಾಲು ರೈತರು ಯಂತ್ರಗಳ ಮೇಲೆ ಅವಲಂಬನೆಯಾಗಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಏರಿಕೆಯಿಂದ ಕಂಗಾಲಾಗಿದ್ದಾರೆ. ಈ ಹಿಂದೆ ಹೊಟ್ಟೆ ಪಾಡಿಗಾಗಿ ಕೂಲಿ ಮಾಡುತ್ತಿದ್ದ ಜನ, ಈಗ ಪೆಟ್ರೋಲಿಗಾಗಿ ಕೂಲಿ ಮಾಡುವ ಪರಿಸ್ಥಿತಿ ಬಂದಿದೆ ಎಂದು ವ್ಯಂಗ್ಯವಾಡಿದರು.

ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್, ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಶಿವಯೋಗಿ ಸ್ವಾಮಿ, ಮಾಜಿ ಶಾಸಕ ಸಿರಾಜ್ ಶೇಖ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆರ್. ಮಂಜುನಾಥ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಆಶಾಲತಾ, ಡಾ. ಉಮೇಶ್ ಬಾಬು, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪಿ.ಟಿ. ಭರತ್, ಕಾಂಗ್ರೆಸ್ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಶಶಿಧರ ಪೂಜಾರ್, ಪುರಸಭೆ ಮಾಜಿ ಅಧ್ಯಕ್ಷ ಎಚ್.ಕೆ. ಹಾಲೇಶ್ ಹಾಜರಿದ್ದರು.

ಜಿಲ್ಲಾ ಪಂಚಾಯ್ತಿ ಸದಸ್ಯರುಗಳಾದ ಎಚ್.ಬಿ. ಪರಶುರಾಮಪ್ಪ, ಡಾ. ಮಂಜುನಾಥ ಉತ್ತಂಗಿ, ರಾಜ್ಯ ಅಲ್ಪ ಸಂಖ್ಯಾತರ ಘಟಕದ ಸದಸ್ಯ ಬಿ. ನಜೀರ್ ಅಹಮದ್, ಹಡಗಲಿ ಪುರಸಭೆ ಅಧ್ಯಕ್ಷ ವಾರದ ಗೌಸ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮುತ್ತಿಗಿ ಸಾಬಳ್ಳಿ ಜಂಬಣ್ಣ, ಟಿಎಪಿಸಿಎಂಎಸ್ ಅಧ್ಯಕ್ಷ ಪ್ರೇಮ್‌ಕುಮಾರ್ ಗೌಡ, ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಲಕ್ಕಳ್ಳಿ ಹನುಮಂತಪ್ಪ, ಮುಖಂಡರಾದ ಪಿ.ಎಲ್ ಪೋಮ್ಯಾನಾಯ್ಕ, ಎನ್. ಮಜೀದ್, ಯಶವಂತ್ ಗೌಡ, ಪ್ರಕಾಶ ಪಟೇಲ್, ಎಂ. ಅಜ್ಜಣ್ಣ, ಯರಬಳ್ಳಿ ಉಮಾಪತಿ, ಜೋಗಿನ ಭರತೇಶ, ಐಗೋಳ ಚಿದಾನಂದ್, ಆಲದಹಳ್ಳಿ ಷಣ್ಮುಖಪ್ಪ ಇನ್ನಿತರರಿದ್ದರು.

## ಆರೋಪ ಸತ್ಯಕ್ಕೆ ದೂರ: ಸ್ಪಷ್ಟನೆ

**(1ನೇ ಪುಟದಿಂದ)** ತೊಡಗಿದ್ದಾರೆ. ಸುಳ್ಳು ಆರೋಪಗಳನ್ನು ಮಾಡುವ ಮೂಲಕ ನಾಗರಿಕರಲ್ಲಿ ಗೊಂದಲ ಸೃಷ್ಟಿಸಿ, ಬಿಜೆಪಿಗೆ ಮುಜುಗರ ಉಂಟು ಮಾಡುವ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಕೂಡಲೇ ವೃಥಾ ಆರೋಪಗಳನ್ನು ಮಾಡುವುದನ್ನು ಬಿಡಿ ಎಂದು ತಾಕೀತು ಮಾಡಿದರು.

ಪಾಲಿಕೆ ವ್ಯಾಪ್ತಿಯ ಆವರಗೆರೆ ಸರ್ವೆ ನಂಬರ್ 220/2 ರಲ್ಲಿ ಪಾಲಿಕೆಯು ಅಕ್ರಮ ಬಡಾವಣೆ ನಿರ್ಮಿಸಿದೆ ಎಂಬ ಕಾಂಗ್ರೆಸ್ ಪಾಲಿಕೆ ಸದಸ್ಯರ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದರು.

ತಮ್ಮ ಅಧಿಕಾರವಧಿಯಲ್ಲಿ ಯಾವುದೇ ಭ್ರಷ್ಟಾಚಾರ, ಅಕ್ರಮ, ಅವ್ಯವಹಾರ ಗಳಿಗೆ ಆಸ್ಪದ ನೀಡುವುದಿಲ್ಲ. ಹೋರಾಟದ ಹಿನ್ನೆಲೆಯಿಂದ ಬಂದಿರುವ ನಾವು ಅಕ್ರಮಗಳಿಗೆ ಅವಕಾಶ ನೀಡುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು. ಹಂದಿ, ನಾಯಿಗಳ ಸ್ಥಳಾಂತರಕ್ಕೆ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಹಂದಿ ಮಾಲೀಕರ ಸಭೆ ಕರೆಯಾಗಿದ್ದು, ಸೂಕ್ತ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಅಮರ್ ಜವಾನ್ ಸ್ಮಾರಕ ಉದ್ಘಾಟನಾ ಕಾರ್ಯಕ್ರಮಕ್ಕೆ ತಾವು ಗೈರಾಗಿರುವ ಬಗ್ಗೆ ಕೇಳಲಾದ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮೇಯರ್ ವೀರೇಶ್ ಅವರು, ಅಂದು ದೂರವಾಣಿ ಕರೆ ಮೂಲಕ ದೂಡಾ ಅಧಿಕಾರಿಗಳು ಆಹ್ವಾನ ನೀಡಿದ್ದರಾದರೂ, ತಮಗೆ ಮೊದಲೇ ನಿಗದಿಯಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರಿಂದ ಬರಲು ಸಾಧ್ಯವಾಗಲಿಲ್ಲ ಎಂದರು.

ಸೈನಿಕರ ಸ್ಮಾರಕ ನಿರ್ಮಾಣ, ಸೈನಿಕರ ಉದ್ಯಾನವನ ನಿರ್ಮಾಣವಾಗಬೇಕೆಂಬ ಬಹುದಿನದ ಕನಸು ತಮ್ಮದಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಿವಿಧ ಸ್ಥಾಯಿ ಸಮಿತಿಗಳ ಅಧ್ಯಕ್ಷರಾದ ಎಲ್.ಡಿ. ಗೋಣೆಪ್ಪ, ಉಮಾ ಪ್ರಕಾಶ್, ಗೀತಾ ದಿಳ್ಳೆಪ್ಪ, ಸದಸ್ಯರಾದ ಪ್ರಸನ್ನಕುಮಾರ್, ಕೆ.ಎಂ. ವೀರೇಶ್, ರೇಣುಕಾ ಶ್ರೀನಿವಾಸ್ ಮತ್ತಿತರರಿದ್ದರು.

## ಭಾರತದ ಆಸ್ತಿಗಳ ಜಪ್ತಿಗೆ ಆದೇಶ

**(1ನೇ ಪುಟದಿಂದ)** ನಂತರ ಈ ಆಸ್ತಿಗಳನ್ನು ಮಾರಲು ಸಾಧ್ಯವಾಗುವುದಿಲ್ಲ. ಹೀಗಾಗಿ ಅಲ್ಲಿರುವ ಭಾರತೀಯ ಅಧಿಕಾರಿಗಳನ್ನು ಕೇರ್ನ್ ತೆರವುಗೊಳಿಸುವ ಸಾಧ್ಯತೆ ಕಡಿಮೆ ಎನ್ನಲಾಗುತ್ತಿದೆ. ಈ ನಡುವೆ ಹೇಳಿಕೆ ನೀಡಿರುವ ಕೇಂದ್ರ ಹಣಕಾಸು ಸಚಿವಾಲಯ, ಫ್ರಾನ್ಸ್ ಸರ್ಕಾರದ ಯಾವುದೇ ಆದೇಶ ದೊರೆತಿಲ್ಲ. ಆದೇಶ ದೊರೆತ ನಂತರ ಸೂಕ್ತ ಕಾನೂನು ಪರಿಹಾರ ಪಡೆದುಕೊಳ್ಳಲಾಗುವುದು ಎಂದು ತಿಳಿಸಿದೆ. ಕಳೆದ ಡಿಸೆಂಬರ್‌ನಲ್ಲಿ ಮೂವರು ಸದಸ್ಯರ ಅಂತರರಾಷ್ಟ್ರೀಯ ಮಧ್ಯಸ್ಥಿಕೆ ಟ್ರಿಬ್ಯೂನಲ್, ಕೇರ್ನ್ ಮೇಲೆ ಹೇರಲಾಗಿದ್ದ ಪೂರ್ವಾನ್ವಯ ತೆರಿಗೆಯನ್ನು ರದ್ದುಗೊಳಿಸಿತ್ತು. ಸರ್ಕಾರ ಈ ತೀರ್ಪನ್ನು ಒಪ್ಪಿಲ್ಲ. ಈ ಬಗ್ಗೆ ನೆದರ್‌ಲ್ಯಾಂಡ್ಸ್ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದೆ.

## ಕೇಂದ್ರದಿಂದ ಮೂಲಭೂತ ಸೌಲಭ್ಯ ನಿಧಿ

**(1ನೇ ಪುಟದಿಂದ)** ವಿನಾಯಿತಿ ಸಿಗಲಿದೆ ಎಂದವರು ಹೇಳಿದ್ದಾರೆ. ಪ್ರಸಕ್ತ ಒಂದು ಸ್ಥಳದಲ್ಲಿ ಸ್ಥಾಪನೆಯಾಗುವ ಘಟಕಗಳಿಗೆ ಮಾತ್ರ ಸಾಲ ವಿನಾಯಿತಿ ಇದೆ. ಇನ್ನು ಮುಂದೆ ಬೇರೆ ಬೇರೆ ಸ್ಥಳಗಳಲ್ಲಿ ಘಟಕಗಳನ್ನು ಸ್ಥಾಪಿಸಿದರೂ ಸಹ, 2 ಕೋಟಿ ರೂ.ಗಳ ಸಾಲದವರೆಗೆ ವಿನಾಯಿತಿ ಸಿಗಲಿದೆ ಎಂದವರು ಹೇಳಿದ್ದಾರೆ.

ಖಾಸಗಿ ವಲಯ ಇಂತಹ 25 ಯೋಜನೆಗಳಿಗೆ ಮಾತ್ರ ಸಾಲ ವಿನಾಯಿತಿ ಪಡೆಯಬಹುದು. ಆದರೆ, ರಾಜ್ಯ ಸಂಸ್ಥೆಗಳು, ರಾಷ್ಟ್ರೀಯ ಹಾಗೂ ರಾಜ್ಯ ಒಕ್ಕೂಟಗಳು, ಎಫ್.ಪಿ.ಓ. ಹಾಗೂ ಸ್ವಸಹಾಯ ಸಂಘಗಳಿಗೆ ಈ ಮಿತಿ ಅನ್ವಯವಾಗುವುದಿಲ್ಲ ಎಂದವರು ಹೇಳಿದ್ದಾರೆ. ಹಣಕಾಸು ಸೌಲಭ್ಯದ ಅವಧಿಯನ್ನು ಈಗಿರುವ 4 ವರ್ಷದಿಂದ 6 ವರ್ಷಗಳಿಗೆ ವಿಸ್ತರಿಸಲಾಗಿದೆ. 2025-26ರವರೆಗೆ ಸೌಲಭ್ಯ ದೊರೆಯಲಿದೆ ಎಂದವರು ತಿಳಿಸಿದ್ದಾರೆ.

## ಲಾಭಗಳ ಬಗ್ಗೆ ರೈತರ ಮನವೊಲಿಕೆ

**(1ನೇ ಪುಟದಿಂದ)** ನಮ್ಮ ಮೇಲಿದೆ. ನಾನು ಎಲ್ಲ ರಾಜ್ಯಗಳಿಗೆ ತೆರಳಿ ರೈತರ ಮನವೊಲಿಸುತ್ತೇನೆ ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಕರಂದ್ಲಾಜೆ ಹೇಳಿದ್ದಾರೆ. ರೈತರ ಆದಾಯ ದುಪ್ಪಟ್ಟುಗೊಳಿಸುವ ಹಾಗೂ ಮಧ್ಯವರ್ತಿಗಳ ಹಿಡಿತದಿಂದ ರೈತರನ್ನು ಹೊರ ತರುವ ಉದ್ದೇಶ ನೂತನ ಕೃಷಿ ಕಾಯ್ದೆಗಳದ್ದಾಗಿದೆ ಎಂದವರು ತಿಳಿಸಿದ್ದಾರೆ.

## ಹುತಾತ್ಮರ ಕುಟುಂಬಗಳಿಗೆ ಗೌರವ ಧನ ನೀಡಿ, ಜನ್ಮ ದಿನಾಚರಣೆ



ದಾವಣಗೆರೆ, ಜು.8- ಜಾಲಿನಗರದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಆವರಣದಲ್ಲಿ ಜಿ.ಎಂ.ಸಿದ್ದೇಶ್ವರ, ಬಿ.ಜಿ.ಅಜಯ್‌ಕುಮಾರ್ ಅಭಿಮಾನಿಗಳ ಬಳಗದ ವತಿಯಿಂದ ಸಂಸದ ಜಿ.ಎಂ.ಸಿದ್ದೇಶ್ವರ, ಮಾಜಿ ಮಹಾಪೌರ ಬಿ.ಜಿ.ಅಜಯ್‌ಕುಮಾರ್ ಹುಟ್ಟುಹಬ್ಬವನ್ನು ವಿನೂತನವಾಗಿ ಆಚರಿಸಲಾಯಿತು.

**ಸಂಸದ ಸಿದ್ದೇಶ್ವರ, ಬಿ.ಜಿ. ಅಜಯ್ ಕುಮಾರ್ ಹುಟ್ಟುಹಬ್ಬ**

ಈ ಕಾರ್ಯಕ್ರಮದ ಪ್ರಯುಕ್ತ ಉತ್ತಮ ಹಸಿರು ಪರಿಸರ ನಿರ್ಮಾಣಕ್ಕಾಗಿ 1100 ಕ್ಕೂ ಹೆಚ್ಚು ಸಸಿಗಳನ್ನು ನೆಡುವ ಕಾರ್ಯಕ್ರಮಕ್ಕೆ ಸಿದ್ದೇಶ್ವರ ಅವರು ಸಸಿ ನೆಟ್ಟು ನೀರು ಹಾಯಿಸುವ ಮೂಲಕ ಚಾಲನೆ ನೀಡಿದರು.

1990 ರಲ್ಲಿ ದೇಶದಾದ್ಯಂತ ಸಂಚರಿಸಿದ ರಾಮ ಜ್ಯೋತಿ ರಥ ಯಾತ್ರೆ ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಗೋಲಿಬಾರ್‌ನಲ್ಲಿ ಗುಂಡೇಟಾಗಿ ಪ್ರಾಣ ತ್ಯಾಗ ಮಾಡಿ, ಹುತಾತ್ಮರಾದ ಶ್ರೀನಿವಾಸ್, ಅಮರೇಶ್, ಶಿವಾಜಿರಾವ್, ಚಿನ್ನಪ್ಪ, ಚಂದ್ರಶೇಖರ್, ದುರ್ಗಪ್ಪ, ರಾಮಕೃಷ್ಣ ಮತ್ತು ಗಣೇಶ್ ಈ ಕುಟುಂಬಬಳಿಗೆ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಟ್ರಸ್ಟ್ ಮತ್ತು ಬಿ.ಜಿ.ಅಜಯ್‌ಕುಮಾರ್ ಅಭಿಮಾನಿಗಳ ಬಳಗದ ವತಿಯಿಂದ ಗೌರವ ಧನವನ್ನು ಅವರ ಕುಟುಂಬಗಳಿಗೆ ವಿತರಿಸಿ, ಸನ್ಮಾನಿಸಿ, ಗೌರವಿಸಲಾಯಿತು.

ಗಣೇಶರಾವ್ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಮುಖಂಡರಾದ ಶಿವಕುಮಾರ್, ಶ್ರೀಮತಿ ಚೇತನಾ ಶಿವಕುಮಾರ್, ಕರೂರು ಗಣೇಶ್, ಜಿ.ಪ್ರತಾಪ್, ಬಿ.ಹೆಚ್.ಪಿ.ರವಿಯಣ್ಣ, ರಾಜು ಅಳಗೋಡಿ, ಸಂತೋಷ್ ಪೈಲ್ವಾನ್, ಮಂಜು ಪೈಲ್ವಾನ್, ಮಂಜುನಾಥ್ ಪವಾರ್, ಆನಂದ್, ಗುಡ್ಡಪ್ಪ, ಪವನ್ ನರಗುಂದ ಮತ್ತು ಇತರರು ಉಪಸ್ಥಿತರಿದ್ದರು.

## ಜಿ.ಪಂ. ಕ್ಷೇತ್ರಗಳ ಮೀಸಲಿಗೆ ಆಕ್ಷೇಪಣೆ

**(1ನೇ ಪುಟದಿಂದ)** ಚುನಾವಣಾ ಆಯೋಗ 3 ತಾ.ಪಂ ಕ್ಷೇತ್ರಗಳನ್ನು ರದ್ದು ಮಾಡಿದೆ. ಗುತ್ತೂರು ಗ್ರಾಮ ಹರಿಹರ ನಗರಸಭೆ ವ್ಯಾಪ್ತಿಗೆ ಸೇರಿರುವುದರಿಂದ ಗುತ್ತೂರು ತಾ.ಪಂ. ಕ್ಷೇತ್ರವನ್ನು ರದ್ದು ಪಡಿಸಲಾಗಿದೆ.

ಎಳೆಹೊಳೆ, ಕುಣೆಬೆಳಕೆರೆ ತಾ.ಪಂ.ಕ್ಷೇತ್ರಗಳನ್ನೂ ರದ್ದು ಮಾಡಿ, ಈ ಕ್ಷೇತ್ರಗಳ ಊರುಗಳನ್ನು ಅಕ್ಕ-ಪಕ್ಕ ಕ್ಷೇತ್ರಗಳಿಗೆ ಸೇರಿಸಿದ್ದಾರೆ. ಈಗ ಹರಿಹರ ತಾಲ್ಲೂಕಿನಲ್ಲಿ 12 ತಾ.ಪಂ. ಕ್ಷೇತ್ರಗಳಿದ್ದು ಬೆಳ್ಳೂಡಿ, ಸಿರಿಗೆರೆ, ವಾಸನ, ಬನ್ನಿಕೋಡು ಕ್ಷೇತ್ರಗಳು ಸಾಮಾನ್ಯವಾಗಿವೆ. ಕೊಂಡಜ್ಜಿ, ಭಾನುವಳ್ಳಿ ಬಿಸಿಎಂ 'ಎ' ಮಹಿಳೆಗೆ ಮೀಸಲಾಗಿದ್ದರೆ, ಹಾಲಿವಾಣ, ಜಿಗಳಿ ಸಾಮಾನ್ಯ ಮಹಿಳಾ ಕ್ಷೇತ್ರಗಳಾಗಿವೆ.

ರಾಜನಹಳ್ಳಿ ಬಿಸಿಎಂ 'ಬಿ' ವರ್ಗಕ್ಕೆ ಮತ್ತು ದೇವರಬೆಳಕೆರೆ ಎಸ್ಸಿ, ಕುಂಬಳೂರು ಎಸ್ಸಿ ಮಹಿಳೆಗೆ, ಕೊಕ್ಕನೂರು ಎಸ್ಟಿ ಮಹಿಳೆಗೆ ಮೀಸಲಾಗಿದೆ.

ಹೊಸ ಜಿ.ಪಂ.ಕ್ಷೇತ್ರವಾಗಿರುವ ಕುಂಬಳೂರು ಸಾಮಾನ್ಯವಾಗಿರುವುದರಿಂದ ಸಹಜವಾಗಿಯೇ ಇಲ್ಲಿ ಕಾಂಗ್ರೆಸ್-ಬಿಜೆಪಿಯಲ್ಲಿ ಟಿಕೆಟ್ ಆಕಾಂಕ್ಷಿಗಳು ಹೆಚ್ಚಾಗಿದ್ದಾರೆ. ಎಸ್ಸಿಗೆ ಮೀಸಲಾಗಿರುವ ಭಾನುವಳ್ಳಿ ಕ್ಷೇತ್ರದಲ್ಲಿ ಆಕಾಂಕ್ಷಿಗಳು ಈಗಾಗಲೇ ಆಯಾ ಪಕ್ಷದ ಮುಖಂಡರನ್ನು ಭೇಟಿ ಮಾಡಿ, ಚುನಾವಣೆಗೆ ಸ್ಪರ್ಧೆ ಮಾಡುವ ಬಗ್ಗೆ ಚರ್ಚೆಯಲ್ಲಿ ತೊಡಗಿದ್ದಾರೆ.

ಹೊಳೆಸಿರಿಗೆರೆ, ಬೆಳ್ಳೂಡಿ, ಕೊಂಡಜ್ಜಿ, ಜಿ.ಪಂ.ಗಳಲ್ಲಿ ಇದುವರೆಗೆ ಆಕಾಂಕ್ಷಿಗಳ ಭರಾಟೆ ಕಂಡು ಬಂದಿಲ್ಲ. ತಾ.ಪಂ. ಕ್ಷೇತ್ರಗಳಲ್ಲೂ ಇದುವರೆಗೂ ಅಷ್ಟು ಉತ್ಸಾಹ ಕಂಡು ಬಂದಿಲ್ಲ. ಮೀಸಲಾತಿ ಪಟ್ಟಿ ಅಧಿಕೃತವಾಗಿ ಗೆಜೆಟ್ ಪ್ರಕಟಣೆ ಆದ ನಂತರ ಮತ್ತಷ್ಟು ಆಕಾಂಕ್ಷಿಗಳು ಬೆಳಕಿಗೆ ಬರುವ ನಿರೀಕ್ಷೆ ಇದೆ.

## ಪಿಹೆಚ್‌ಡಿ ಪ್ರೋಗ್ರಾಂನಲ್ಲಿ ಡಾ. ಆನಂದ್



ದಾವಣಗೆರೆ, ಜು.8- ಜರ್ಮನಿಯ ಹೈಡೆಲ್ಬರ್ಗ್‌ನ ಜರ್ಮನ್ ಕ್ಯಾನ್ಸರ್ ಸಂಶೋಧನಾ ಕೇಂದ್ರವು ಹಮ್ಮಿಕೊಂಡಿದ್ದ ಡಿಕೆಎಫ್‌ಝಡ್ ಇಂಟರ್‌ನ್ಯಾಷನಲ್ ಪಿಹೆಚ್‌ಡಿ ಪ್ರೋಗ್ರಾಂನಲ್ಲಿ ಡಾ. ಎಂ.ಟಿ. ಆನಂದ್ ಪಾಲ್ಗೊಂಡು, ಗೌರವ ಪ್ರಶಸ್ತಿ ಪತ್ರಕ್ಕೆ ಪಾತ್ರರಾಗಿದ್ದಾರೆ.

ಆನಂದ್, ಮಾಯಕೊಂಡದ ದಿ. ಶೆಟ್ರು ರುದ್ರಪ್ಪನವರ ಮೊಮ್ಮಗ ಹಾಗೂ ಶ್ರೀಮತಿ ಲಲಿತ ಮತ್ತು ಎಂ.ಆರ್. ತಿಪ್ಪೇಸ್ವಾಮಿ ಅವರ ಪುತ್ರ.

ವಿಜಯ್ ಪ್ಯಾರಾ ಮೆಡಿಕಲ್ ಕಾಲೇಜ್
VIJAY PARA MEDICAL COLLEGE
ಡಿ.ಸಿ.ಎಂ. ಟೌನ್‌ಶಿಪ್, ದಾವಣಗೆರೆ.
ಪ್ರವೇಶ ಪ್ರಾರಂಭ
ಕೋರ್ಸ್‌ಗಳು
ಡಿಪ್ಲೋಮಾ ಇನ್ ಲ್ಯಾಬ್ ಟೆಕ್ನಾಲಜಿ DMLT
ಡಿಪ್ಲೋಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್ DHI
ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ DOT
ಡಿಪ್ಲೋಮಾ ಇನ್ ಎಕ್ಸರೇ ಟೆಕ್ನಿಷಿಯನ್ DMIT
SSLC ಪಾಸಾದವರಿಗೆ 3 ವರ್ಷ
PUC Science ಪಾಸಾದವರಿಗೆ 2 ವರ್ಷ
7760155550
9945422553




ಹರಿಹರ, ಜು.8- ನಾಳೆ ಶುಕ್ರವಾರದ ಮಣ್ಣೆತ್ತಿನ ಅಮವಾಸ್ಯೆ ನಿಮಿತ್ತ ಮಣ್ಣಿನಿಂದ ಮಾಡಿದ ಎತ್ತಿನ ಮೂರ್ತಿಗಳನ್ನು ಖರೀದಿ ಮಾಡಿ ತಂದು ಪೂಜಿಸುತ್ತಾರೆ. ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಗಳಿಂದ ಉತ್ತಮ ಇಳುವರಿ ಬರಲಿ ಎಂದು ವಿಶೇಷವಾಗಿ ಈ ದಿನ ಪೂಜೆ ಸಲ್ಲಿಸುತ್ತಾರೆ. ನಗರದ ದೇವಸ್ಥಾನ ರಸ್ತೆಯಲ್ಲಿ ಮಣ್ಣಿನಿಂದ ತಯಾರಿಸಿದ ಎತ್ತಿನ ಮೂರ್ತಿಯನ್ನು ಸಾರ್ವಜನಿಕರು ಮತ್ತು ರೈತರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು.

# ಜಿಲ್ಲೆಯ ಐವರು ಅಗ್ನಿಶಾಮಕ ಸಿಬ್ಬಂದಿಗೆ ಸಿಎಂ ಪದಕ



ದಾವಣಗೆರೆ, ಜು.8- ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಬಸವಪ್ರಭು ಶರ್ಮ ಸೇರಿ ಜಿಲ್ಲೆಯ ಐವರು ಅಗ್ನಿಶಾಮಕ ಅಧಿಕಾರಿ ಮತ್ತು ಸಿಬ್ಬಂದಿಗಳು 2019ರ ಮುಖ್ಯಮಂತ್ರಿ ಪದಕಕ್ಕೆ ಭಾಜನರಾಗಿದ್ದಾರೆ.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಬಸವಪ್ರಭು ಶರ್ಮ, ಜಗಳೂರಿನ ಅಗ್ನಿಶಾಮಕ ಠಾಣೆಯ ಲೀಡಿಂಗ್ ಫೈರ್ ಮನ್ ಗಳಾದ ಕೆ. ರೇವಣಸಿದ್ದಪ್ಪ, ಜಿ.ಪಿ. ರಾಮನಾಥ, ಹರಪನಹಳ್ಳಿ ತಾಲ್ಲೂಕು ಸಿಂಗ್ರಿಹಳ್ಳಿ ದೊಡ್ಡ ತಾಂಡಾದ ದಾವಣಗೆರೆ ಅಗ್ನಿಶಾಮಕ ಠಾಣೆಯ ಫೈರ್ ಮನ್ ಗಳಾದ ಅಶೋಕ ನಾಯ್ಕ್ ಮತ್ತು ಎಸ್.ಕೆ. ರಾಜೇಶ್ ಮುಖ್ಯಮಂತ್ರಿ ಪದಕಕ್ಕೆ ಭಾಜನರಾದವರು.

ಸೇವೆಯಲ್ಲಿ ವಿಶಿಷ್ಟ ಸಾಧನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಸಿಎಂ ಪದಕ ನೀಡುತ್ತಿದ್ದು, ಇದೇ ದಿನಾಂಕ 13ರಂದು ನಡೆಯುವ ಸಮಾರಂಭದಲ್ಲಿ ಪುರಸ್ಕೃತರಿಗೆ 5 ಸಾವಿರ ಪ್ರೋತ್ಸಾಹ ಧನ, ಪದಕ ಪ್ರದಾನ ಮಾಡಲಾಗುತ್ತದೆ.

ಬಸವಪ್ರಭು ಶರ್ಮ 2018ರಲ್ಲಿ ಧಾರವಾಡದಲ್ಲಿ ಕಟ್ಟಡ ಕುಸಿತದಲ್ಲಿ ಹಲವರ ರಕ್ಷಣೆ, ಹರಿಹರದ ತುಂಗಭದ್ರಾ ನದಿ ತೀರದಲ್ಲಿ ಪ್ರವಾಹ ಉಂಟಾದಾಗ ಕೋತಿಗಳ ರಕ್ಷಣೆ, ಶಾಸಕ ಶಾಮನೂರು ಶಿವಶಂಕರಪ್ಪ ಒಡೆತನದ ಫ್ಯಾಕ್ಟರಿಗೆ ಹಾಗೂ ಪೇಂಟ್ ಅಂಗಡಿಗೆ ಬೆಂಕಿ ಬಿದ್ದಾಗ ನಂದಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ಶಿಕ್ಷಣಾಧಿಕಾರಿ ಪುಷ್ಪಲತಾಗೆ ಪಿಎಚ್‌ಡಿ



ದಾವಣಗೆರೆ, ಜು.8- ಶಿಕ್ಷಣ ಶಾಸ್ತ್ರ ವಿಷಯದಲ್ಲಿ ಮಂಡಿಸಿದ ಮಹಾ ಪ್ರಬಂಧಕ್ಕೆ ಜಿಲ್ಲಾ ಪಂಚಾಯ್ತಿಯ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಾಲತಾ ಅವರಿಗೆ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಪಿಹೆಚ್‌ಡಿ ಪದವಿ ನೀಡಿದೆ.

'ಸ್ಟಡಿ ಆನ್ ದ ಎಫೆಕ್ಟ್ ಆಫ್ ಹ್ಯುಮನ್ ರಿಸೋರ್ಸ್ ಡೆವಲಪ್ ಮೆಂಟ್ ಆ್ಯಕ್ಟಿವಿಟೀಸ್ ಆನ್ ಲೀಡರ್‌ಶಿಪ್ ಆಫ್ ಪ್ರೈಮರಿ ಸ್ಕೂಲ್ ಹೆಡ್ ಮಾಸ್ಟರ್ಸ್' ವಿಷಯ ಕುರಿತಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಿಕ್ಷಣ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಎಂ.ಸಿ. ಎರ್ರಿಸ್ವಾಮಿ ಅವರ ಮಾರ್ಗದರ್ಶನದಲ್ಲಿ ಪುಷ್ಪಲತಾ ಅವರು ಮಹಾಪ್ರಬಂಧವನ್ನು ಮಂಡಿಸಿದ್ದರು.






















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte